# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಅರವಿಂದ ಕುಮಾರ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 10(85) |
| ಉತ್ತರಿಸಬೇಕಾದ ದಿನಾಂಕ | 13.02.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೋಟ್ಯಾಂತರ ರೂಪಾಯಿಯ ಆಸ್ತಿ ಅವ್ಯವಹಾರದ ಬಗ್ಗೆ ಎರಡು ತನಿಖೆಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ಸ್ವೀಕೃತಗೊಂಡಿದ್ದ ದೂರುಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತನಿಖಾ ತಂಡಗಳನ್ನು ಸರ್ಕಾರದಿಂದ ನೇಮಿಸಿ ಆದೇಶಿಸಲಾಗಿರುತ್ತದೆ **(ಅನುಬಂಧ-1).** |
| ಆ) | ಬಂದಿದ್ದಲ್ಲಿ, ಆ ತನಿಖೆ ಜರುಗಿ ಹಲವಾರು ತಿಂಗಳುಗಳಾದರೂ ಆ ವರದಿಯ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | **(i) ಸರ್ಕಾರದ ಆದೇಶ ಸಂಖ್ಯೆ: ನಅಇ 187 ಗುಅಪ್ರಾ 2023, ದಿ:19.08.2023 ರಲ್ಲಿ ನೇಮಿಸಿದ ತನಿಖಾ ತಂಡ ನೀಡಿದ ವರದಿಯನ್ವಯ ಕೈಗೊಂಡ ಕ್ರಮ:**<br>• ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿ ದಿ:04.12.2023 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪ್ರಾಧಿಕಾರದ ಆಯುಕ್ತರು ಹಾಗೂ ಅಧ್ಯಕ್ಷರು ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪವೆಸಗಿರುವುದಾಗಿ ಅಭಿಪ್ರಾಯ ನೀಡಿರುತ್ತಾರೆ.<br>• ತನಿಖಾ ವರದಿಯ ಆಧಾರದ ಮೇಲೆ ನಿಯಮಾನುಸಾರ ಶ್ರೀ ಅಭಯ್ ಕುಮಾರ್, ಹಿಂದಿನ ಆಯುಕ್ತರು, ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಪ್ರಾದೇಶಿಕ ಆಯುಕ್ತರು ನೀಡಿರುವ ವರದಿಯ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸುವಂತೆ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಲಾಗಿತ್ತು **(ಅನುಬಂಧ-2).** ಸದರಿ ಅಧಿಕಾರಿಯವರು ನಿಗದಿತ ಅವಧಿಯಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.<br>• ಶ್ರೀ ಅಭಯ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಇವರು ಮೂಲತಃ ಪೌರಾಡಳಿತ ವೃಂದದ ಅಧಿಕಾರಿಯಾಗಿದ್ದು ಸದರಿಯವರ ಕರ್ತವ್ಯ ಲೋಪದ ಬಗ್ಗೆ ಕರ್ನಾಟಕ ನಾಗರಿಕ ಸೇವಾ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) |
| ಇ) | ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಅಧಿಕಾರಿ ಹಾಗೂ ಇತರರ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಂಡಿದೆ? | |

ನಿಯಮಗಳು 1957 ರನ್ವಯ ಕಾರಣ ಕೇಳುವ ನೋಟಿಸ್‌ನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲು ಮಾನ್ಯ ಪೌರಾಡಳಿತ ಸಚಿವರ ಅನುಮೋದನೆ ಕೋರಲಾಗಿದೆ.

- ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿ ದಿ:04.12.2023 ರಂದು ಸಲ್ಲಿಸಿರುವ ವರದಿಯಲ್ಲಿ ಪ್ರಾಧಿಕಾರದ ಅಧ್ಯಕ್ಷರು ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪವೆಸಗಿರುವುದು ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ.

- ಶ್ರೀ ಬಾಬು ವಾಲಿ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 147 ಗುಅಪ್ರಾ 2020 (ಭಾ-1) ದಿನಾಂಕ:27.11.2020ರಲ್ಲಿ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಸದರಿಯವರು ದಿನಾಂಕ:01.12.2020 ರಿಂದ 23.05.2023ರವರೆಗೆ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 104 ಬೆಮಪ್ರಾ 2023, ದಿನಾಂಕ:23.05.2023ರಲ್ಲಿ ಅಧ್ಯಕ್ಷರ ಹುದ್ದೆಯ ನಾಮನಿರ್ದೇಶನವನ್ನು ರದ್ದುಪಡಿಸಲಾಗಿದೆ.

- ಪ್ರಸ್ತುತ ಶ್ರೀ ಬಾಬು ವಾಲಿ ಇವರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯಿಂದ ವಿಮುಕ್ತಿಗೊಂಡಿರುವುದರಿಂದ ಸದರಿಯವರ ಆರೋಪದ ವಿರುದ್ಧ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಲಂ 58 ಮತ್ತು ಭಾರತೀಯ ದಂಡ ಸಂಹಿತೆಯ ಪ್ರಕರಣ 21ರನ್ವಯ ಯಾವ ರೀತಿಯ ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿದೆ.

**(ii) ಸರ್ಕಾರದ ಪತ್ರ ಸಂಖ್ಯೆ: ನಅಇ 49 ಸಮನ್ವಯ 2023, ದಿನಾಂಕ:04.03.2023 ರಲ್ಲಿ ನೇಮಿಸಿದ ತನಿಖಾ ತಂಡ ನೀಡಿದ ವರದಿಯನ್ವಯ ಕೈಗೊಂಡ ಕ್ರಮ:**

- ತನಿಖಾ ತಂಡವು ಬೀದರ ನಗರದ ಚಿದ್ರಿ ಗ್ರಾಮದ ಸ.ನಂ. 125 (ಸಿದ್ರಾಮಯ್ಯ ಬಡಾವಣೆ) ಹಾಗೂ ನೌಬಾದ ಸ.ನಂ. 8 (ವಾಲಿವ್ಯೂವ್) ರಲ್ಲಿ ಪ್ರತ್ಯೇಕವಾಗಿ 9 ಹಾಗೂ 4 ಇರುವ ಬಿಡಿ ನಿವೇಶನಗಳನ್ನು E-proc.karnataka.gov.in ರ

| | | |
|---|---|---|
| | | ಮುಖಾಂತರ ಇ-ಹರಾಜು ಮಾಡಿರುತ್ತಾರೆ. ಸದರಿ ಹರಾಜಿನ ಪ್ರಕ್ರಿಯೆಯಲ್ಲಿ ನ್ಯೂನ್ಯತೆಗಳು ಕಂಡುಬಂದಿದ್ದು ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸದೇ ಇರುವುದು ಹಾಗೂ ಇದರಿಂದ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ವರದಿ ಸಲ್ಲಿಸಲಾಗಿದೆ. **(ಅನುಬಂಧ-3).**<br><br>• ತನಿಖಾ ತಂಡದ ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸದೇ, ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟುಮಾಡಲು ಆ ಅವಧಿಯಲ್ಲಿ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಅಭಯ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) (ಪೌರಾಡಳಿತ ಇಲಾಖೆ) ಇವರು ಕಾರಣರಾಗಿರುತ್ತಾರೆ.<br><br>• ಶ್ರೀ ಅಭಯ್ ಕುಮಾರ್ ಇವರ ವಿರುದ್ಧ ಕರ್ತವ್ಯ ಲೋಪ ಹಾಗೂ ಪ್ರಾಧಿಕಾರಕ್ಕೆ ಆರ್ಥಿಕನಷ್ಟ ಉಂಟು ಮಾಡಿರುವ ಬಗ್ಗೆ ಗಂಭೀರ ಸ್ವರೂಪದ ಆರೋಪಗಳು ಮೇಲ್ನೋಟಕ್ಕೆ ತನಿಖಾ ತಂಡದ ವರದಿಯಿಂದ ಕಂಡುಬಂದಿರುವ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮಗಳನ್ವಯ ಇಲಾಖಾ ವಿಚಾರಣೆ ಬಾಕಿ ಇರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸುವಂತೆ ಸಕ್ಷಮ ಪ್ರಾಧಿಕಾರವಾದ ಪೌರಾಡಳಿತ ಶಾಖೆಗೆ ಸೂಚಿಸಲು ಕ್ರಮವಹಿಸಲಾಗಿದೆ. |

ಸಂಖ್ಯೆ : ನಅಇ 02 ಎಲ್‌ಸಿಕ್ಯೂ 2024

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು

ಅನುಬಂಧ - 1

72

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಅನುಮೋದನೆ ನೀಡಲಾಗಿರುವ ಬಡಾವಣೆಗಳ ಬಗ್ಗೆ ಹಾಗೂ ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಿವೇಶನಗಳ ಕುರಿತು ಪರಿಶೀಲಿಸಿ ವರದಿ ನೀಡುವ ಬಗ್ಗೆ.

**ಓದಲಾಗಿದೆ:**
1. ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ದಿನಾಂಕ:26.06.2023 ರಂದು ನೀಡಿರುವ ದೂರು.
2. ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ವಿರುದ್ಧ ಹಕ್ಕು ಬಾಧ್ಯತಾ ಸಮತಿಗೆ ನೀಡಿರುವ ದೂರು.
3. ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ದಿನಾಂಕ:08.08.2023 ರಂದು ನೀಡಿರುವ ದೂರು.

*******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ದಿನಾಂಕ: 26.06.2023ರಲ್ಲಿ ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ ರವರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ:16.12.2022, 24.01.2023 ಮತ್ತು 21.03.2023ರಂದು ಜರುಗಿದ ಸಭೆಯ ನಿರ್ಣಯವು ನಿಯಮಬಾಹಿರವಾಗಿದ್ದು, ಸದರಿ ಸಭೆಯ ನಿರ್ಣಯವನ್ನು ರದ್ದುಪಡಿಸುವಂತೆ ಹಾಗೂ ಪ್ರಾಧಿಕಾರದ ಅಧ್ಯಕ್ಷರು ಮತ್ತು ಆಯುಕ್ತರ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿದ್ದು, ಸದರಿಯವರ ದೂರಿನಲ್ಲಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಆಯುಕ್ತರು ನಿಯಮಬಾಹಿರವಾಗಿ ಕ್ರಮಕೈಗೊಂಡಿರುವುದರಿಂದ ಸದರಿಯವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2)ರಲ್ಲಿ ದಿನಾಂಕ:17.06.2021 ರಂದು ಆಯೋಜಿಸಿದ ಬೀದರ್ ಪ್ರಾಧಿಕಾರದ ಸಭೆಯ ಸೂಚನೆಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಲೀ ಅಥವಾ ಕೆಳಹಂತದ ಅಧಿಕಾರಿಯ ಕೈಯಿಂದ ಕಳುಹಿಸದೇ ಕಛೇರಿಯ ಜವಾನನಿಂದ ಯಾವುದೇ ಅಜೆಂಡಾ ಇಲ್ಲದೇ ಸೂಚನಾ ಪತ್ರ ಕಳುಹಿಸಿರುವುದರಿಂದ ಮಾನ್ಯ ವಿಧಾನಪರಿಷತ್ತು ಸದಸ್ಯರು ಹಕ್ಕುಬಾಧ್ಯತಾ ಸಮಿತಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ಹಕ್ಕು ಬಾದ್ಯತಾ ಸಮಿತಿಯಲ್ಲಿ ಬಾಕಿ ಇರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(3)ರಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿಯವರು ಮತ್ತೊಂದು ಮನವಿಯನ್ನು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಿ, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರಾಗಿದ್ದ ಶ್ರೀ ಅಭಯ್ ಕುಮಾರ್ ಮತ್ತು ಅಂದಿನ ಅಧ್ಯಕ್ಷರಾದಂತಹ ಬಾಬು ವಾಲಿಯವರು ಸೇರಿಕೊಂಡು ಕೋಟ್ಯಾಂತರ ರೂಪಾಯಿಯ ಅವ್ಯವಹಾರ ಮತ್ತು ಭ್ರಷ್ಟಾಚಾರ ಮಾಡಿರುತ್ತಾರೆ. ಅಂದಿನ ಆಯುಕ್ತರಾದಂತಹ ಶ್ರೀ ಅಭಯ್ ಕುಮಾರ್ ರವರು ಎಲ್ಲಾ ನಿಯಮಗಳನ್ನು ಹಾಗೂ ಸಭೆಯಲ್ಲಿ ಅದಂತಹ ನಡವಳಿಗಳನ್ನು ಗಾಳಿಗೆ ತೂರಿ ಅಧ್ಯಕ್ಷರು ಮತ್ತು ಅಭಯ ಕುಮಾರ್ ರವರು ತಮಗೆ ಅನುಕೂಲವಾಗುವಂತಹ ನಡವಳಿಗಳನ್ನು ಬರೆದುಕೊಂಡು ಅವ್ಯವಹಾರ ಮತ್ತು ಭ್ರಷ್ಟಾಚಾರ ನಡೆಸಿರುವುದಾಗಿ ತಿಳಿಸುತ್ತಾ, ಉದಾಹರಣೆಗಾಗಿ ಕೆಲವು ಕಾಮಗಾರಿಗಳನ್ನು ಕೈಗೊಂಡಿರುವ ಕುರಿತು ತಿಳಿಸಿ, ಸಂಬಂಧಪಟ್ಟ ಆಯುಕ್ತರನ್ನು ಅಮಾನುತ್ತುಗೊಳಿಸಿ ಉನ್ನತಮಟ್ಟದ ತನಿಖೆಗೆ ಆದೇಶಿಸುವಂತೆ ಕೋರಿರುತ್ತಾರೆ.

ದಿನಾಂಕ 24/08/2023

ಈ ಹಿನ್ನಲೆಯಲ್ಲಿ ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ ರವರ ದೂರಿನಲ್ಲಿನ ಅಂಶಗಳ ಕುರಿತು ಹಾಗೂ ಪ್ರಾಧಿಕಾರದಿಂದ ಕಳೆದ 03 ವರ್ಷಗಳಲ್ಲಿ ಅನುಮತಿ ನೀಡಲಾಗಿರುವ ಬಡಾವಣೆಗಳ ವಿವರ ಸಾರ್ವಜನಿಕರಿಗೆ ಹಂಚಿಕೆ ಮಾಡಿರುವ ಬಿಡಿ, ಮೂಲೆ, ವಾಣಿಜ್ಯ ಮತ್ತು ಸಿ.ಎ. ನಿವೇಶನಗಳ ವಿವರ ಹಾಗೂ ಪ್ರಾಧಿಕಾರದಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ, ಭೌತಿಕ ಮತ್ತು ಆರ್ಥಿಕ ಪ್ರಗತಿಯೊಂದಿಗೆ ವಿವರಗಳನ್ನು ಪಡೆಯುವುದು ಮತ್ತು ಅನಧಿಕೃತವಾಗಿ ರಚಿತವಾಗಿರುವ ಬಡಾವಣೆಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸುವುದು ಸೂಕ್ತವೆಂದು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 187 ಗುಅಪ್ರಾ 2023 (ಇ-ಕಡತ),**
**ಬೆಂಗಳೂರು, ದಿನಾಂಕ:19.08.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ, ಅಂಶಗಳ ಹಿನ್ನಲೆಯಲ್ಲಿ ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನಪರಿಷತ್ ಸದಸ್ಯರು ಇವರು ನೀಡಿರುವ ದೂರಗಳ ಕುರಿತು ಮತ್ತು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ:16.12.2022, 24.01.2023 ಮತ್ತು 21.03.2023ರಂದು ಜರುಗಿದ ಸಭೆಯ ನಡವಳಿಗಳು ನಿಯಮಾನುಸಾರವಾಗಿ ಇರುವ ಕುರಿತು ಹಾಗೂ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ 03 ವರ್ಷಗಳಲ್ಲಿ ಅನುಮತಿ ನೀಡಲಾಗಿರುವ ಬಡಾವಣೆಗಳ ವಿವರ, ಸಾರ್ವಜನಿಕರಿಗೆ ಹಂಚಿಕೆ ಮಾಡಿರುವ ಬಿಡಿ, ಮೂಲೆ, ವಾಣಿಜ್ಯ ಮತ್ತು ಸಿ.ಎ. ನಿವೇಶನಗಳ ವಿವರ ಹಾಗೂ ಪ್ರಾಧಿಕಾರದಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳ ಬಗ್ಗೆ ಕೂಲಂಕಷವಾಗಿ ಸ್ಥಳ ಪರಿಶೀಲನೆ ನಡೆಸಿ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಿ 15 ದಿನಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾ.ಗ, ಕಲಬುರಗಿ ಇವರನ್ನು ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ,**

1. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ. **(ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನಪರಿಷತ್ ಸದಸ್ಯರು ಇವರು ನೀಡಿರುವ ದೂರಗಳ ಪ್ರತಿಯನ್ನು ಲಗತ್ತಿಸಿದೆ)**
2. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ.
3. ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ್.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಆಪ್ತ ಕಾರ್ಯದರ್ಶಿ.

1. **ಬೀದರ ನಗರದಲ್ಲಿ ಬಸ್ ತಂಗುದಾಣ ಮತ್ತು ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕಾಗಿ ರೂ:30.00 ಲಕ್ಷ ಈ ಬಸ್ ತಂಗುದಾಣ ಮತ್ತು ಶೌಚಾಲಯಗಳ ಅಗತ್ಯವೇ ಇರಲಿಲ್ಲ ಸಾಮಾನ್ಯ ಸಭೆಯಲ್ಲಿ ಈ ಕುರಿತು ವಿರೋಧ ವ್ಯಕ್ತಪಡಿಸಿದರು ಕೂಡ ಇದಕ್ಕೆ ಹಣವ್ಯಯ ಮಾಡಲಾಗಿದೆ ಎಂದು ಸುಳ್ಳು ದಾಖಲೆ ನಿರ್ಮಿಸಿ ಇದನ್ನು ಬ್ರಷ್ಟಾಚಾರ ಮಾಡಿರುತ್ತಾರೆ.**

ಬೀದರ ನಗರದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಬಸ್ ತಂಗುದಾಣ ನಿರ್ಮಿಸಲು ಪ್ರಾಧಿಕಾರದ ವಸತಿ ಅಭಿವೃದ್ಧಿ ಯೋಜನೆಯಾದ ಗೋರನಳ್ಳಿ(ಬಿ) ಗ್ರಾಮದ ಸರ್ವೆ ನಂ. 22/2 ಮತ್ತು 21/1 (ಸನ್ಮಾನ್ಯ ಶ್ರೀ.ಬಿ.ಎಸ್. ಯಡಿಯೂರಪ್ಪಾ) ವಸತಿ ಬಡವಣೆಗೆ ಹೋಗುವ ರಸ್ತೆಯಲ್ಲಿ ನಿರ್ಮಾಣ ಮಾಡಲು ₹30.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಬೀದರ ನಗರದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಬಸ್ ತಂಗುದಾಣ ನಿರ್ಮಿಸಲು ಪ್ರಾಧಿಕಾರದ ವಸತಿ ಅಭಿವೃದ್ಧಿ ಯೋಜನೆಯಾದ ಗೋರನಳ್ಳಿ(ಬಿ) ಗ್ರಾಮದ ಸರ್ವೆ ನಂ. 22/2 ಮತ್ತು 21/1 (ಸನ್ಮಾನ್ಯ ಶ್ರೀ.ಬಿ.ಎಸ್. ಯಡಿಯೂರಪ್ಪಾ) ವಸತಿ ಬಡವಣೆಗೆ ಹೋಗುವ ರಸ್ತೆಯಲ್ಲಿ ನಿರ್ಮಾಣ ಮಾಡಲು ₹30.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ಸಾರ್ವಜನಿಕ ಗ್ರಂಥಾಲಯ ನಿರ್ಮಿಸಲು ಬೀದರ ನಗರದ ಚಿಕ್ಕಪೇಟ್ ಗ್ರಾಮದ ಸರ್ವೆ ನಂ. 38/1 ರ ಅನುಮೋದಿತ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯದ ನಿವೇಶನದಲ್ಲಿನ 9ಮೀ*12ಮೀ ಜಾಗೆಯಲ್ಲಿ ಗ್ರಂಥಾಲಯವನ್ನು ನಿರ್ಮಿಸಲು ₹20.00(ಲಕ್ಷ)ಗಳ ಅನುದಾನವನ್ನು ನಿಗಧಿಪಡಿಸಿ ದಿನಾಂಕ:24-01-2023 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:07 ರಲ್ಲಿ ಚರ್ಚಿಸಿ ನಿರ್ಣಯಿಸಿರುತ್ತಾರೆ.

ಮುಂದುವರೆದು ಬಸ್ ತಂಗುದಾಣ ಹಾಗೂ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕಾಗಿ ₹30.00 ಲಕ್ಷಗಳಿಗೆ ದಿನಾಂಕ 27-03-2023 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ರವರು ಆಡಳಿತಾತ್ಮಕ ಅನುಮೊದನೆ ನೀಡಿರುತ್ತಾರೆ ಹಾಗೂ ಸಾರ್ವಜನಿಕ ಗ್ರಂಥಾಲಯ ನಿರ್ಮಾಣಕ್ಕಾಗಿ ₹20.00 ಲಕ್ಷಗಳ ಕಾಮಗಾರಿಗೆ ದಿನಾಂಕ 27-03-2023 ರಂದು ಆಯುಕ್ತರು, ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

ಬೀದರ ನಗರದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಬಸ್ ತಂಗುದಾಣ ನಿರ್ಮಿಸಲು ಕಾಮಗಾರಿಗಳಿಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಚೆಕ್ ಸಂಖ್ಯೆ:073057 ದಿನಾಂಕ:28-03-2023 ರಂತೆ ₹14,70,000-00, ಚೆಕ್ ಸಂಖ್ಯೆ:073066 ದಿನಾಂಕ:28-03-2023 ರಂತೆ ₹ರೂ:14,70,000-00, ಚೆಕ್ ಸಂಖ್ಯೆ:073060 ದಿನಾಂಕ:28-03-2023 ₹9,80,000-00 ಹಾಗೂ ಚೆಕ್ ಸಂಖ್ಯೆ:073068 ದಿನಾಂಕ:28-03-2023 ₹9,80,000-00 ಒಟ್ಟು ಮೊತ್ತ ₹49,00,000-00 ಗಳನ್ನು ಬಿಡುಗಡೆ ಮಾಡಿರುತ್ತಾರೆ. **(ಅನುಬಂಧ-1)**

ದಿನಾಂಕ: 26-06-2023 ರಂದು ಬೀದರ ನಗರದ ಚಿಕ್ಕಪೇಟ್ ಪ್ರದೇಶದ ಸರ್ವೆ ನಂ. 38/1 ವಸತಿ ವಿನ್ಯಾಸದ ನಾಗರಿಕ ಸೌಲಭ್ಯ ನಿವೇಶನದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಸಾರ್ವಜನಿಕ ಗ್ರಂಥಾಲಯಗಳನ್ನು ನಿರ್ಮಿಸಲು ಆಯುಕ್ತರು, ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಸ್ಥಳ ಹಸ್ತಾಂತರ ಮಾಡಿರುತ್ತಾರೆ **(ಅನುಬಂಧ-2)** ಆದರೆ ಸದರಿ ನಾಗರೀಕ ಸೌಲಭ್ಯ ನಿವೇಶನವನ್ನು ದಿನಾಂಕ:21-05-2020 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ಪ್ರಾಧಿಕಾರದ ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ ಉಪ-ಸಮಿತಿ ಸಭೆಯಲ್ಲಿ ನಿರ್ಣಯಿಸಿ ಚಿಕ್ಕಪೇಟ್ ಸರ್ವೆ ಸಂಖೆ:38/1 ವಿಸ್ತೀರ್ಣ:1611.10 ಚ.ಮೀ ಅಧ್ಯಕ್ಷರು ಕೆ.ಪಿ.ಶಿಕ್ಷಣ ಸಂಸ್ಥೆ, ಬೀದರ ರವರಿಗೆ ಹಂಚಿಕೆ ಮಾಡಲಾಗಿರುತ್ತದೆ **(ಅನುಬಂಧ-3)**

**ಅಭಿಪ್ರಾಯ** : ಬೀದರ ನಗರದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಬಸ್ ತಂಗುದಾಣ ನಿರ್ಮಿಸಲು ನಾಗರೀಕ ಸೌಲಭ್ಯ (ಸಿ.ಎ.) ಅವಶ್ಯಕತೆ ಕುರಿತು ಸ್ಪಷ್ಟತೆಯಿರುವುದಿಲ್ಲ. ನಿವೇಶನಗಳಲ್ಲಿ ಬಸ್ ತಂಗುದಾಣ ಕಾಮಗಾರಿಯನ್ನು ನಿರ್ಮಿಸಲು ಯಾವುದೇ ಸ್ಥಳ ಹಸ್ತಾಂತರ ಪಡೆದಿರುವ ದಾಖಲೆಗಳು ಲಭ್ಯವಿರುವುದಿಲ್ಲ. ಈ ಕುರಿತು ಸರ್ಕಾರದ ಅನುಮೋದನೆಯನ್ನೂ ಸಹ ಪಡೆದಿರುವುದಿಲ್ಲ. ಇದು ಸರಕಾರದ ನಿಯಮಾವಳಿಗಳ ವಿರುದ್ಧವಾಗಿರುತ್ತದೆ. ಆದರೆ ಕಾಮಗಾರಿಯೂ ಪ್ರಾರಂಭವಾಗದೇ ಇರುವುದರಿಂದ ಅನುದಾನದ ದುರ್ಬಳಕೆ/ಭೃಷ್ಟಾಚಾರದ ಪ್ರಶ್ನೆ ಉದ್ಭವಿಸುವುದಿಲ್ಲ.

**2. ಬೀದರ ನಗರದ 15 ಸಾರ್ವಜನಿಕ ಉದ್ಯಾನವನಗಳು ಅಭಿವೃದ್ಧಿ ಕೆಲಸಗಳಿಗೆ 150 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ ಎಂದು ತಿಳಿಸಲಾಗಿದೆ. ಆದರೆ ಈ ವಿಷಯದ ಬಗ್ಗೆ ಕೂಡ ಉದ್ಯಾನ ಅಭಿವೃದ್ಧಿಗಾಗಿ ಸಾಮಾನ್ಯ ಸಭೆಯಲ್ಲಿ ವಿರೋಧ ವ್ಯಕ್ತವಾದರೂ ಕೂಡ ಈ ಕಾಮಗಾರಿಯನ್ನು ಕೈಗೆತ್ತಿಕೊಂಡು ಭ್ರಷ್ಟಾಚಾರ ಮಾಡಿರುತ್ತಾರೆ.**

ಬೀದರ ನಗರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 15 ಉದ್ಯಾನವನಗಳಲ್ಲಿ ಸಾರ್ವಜನಿಕರಿಗೆ ಪ್ರತಿ ದಿನ ವಾಕಿಂಗ್, ಜಿಮ್ ಕೂಡಲು ಆಸನಗಳು, ಮಕ್ಕಳಿಗೆ ಆಟಿಕೆ ಸಾಮನುಗಳನ್ನು ಹಾಗೂ ಇನ್ನಿತರ ಅವಶ್ಯಕ ಸಾಮಗ್ರಿಗಳನ್ನು ಅಳವಡಿಸಲು ಪ್ರತಿ ಉದ್ಯಾನವನ್ಕೆ ₹10.00 ಲಕ್ಷಗಳಂತೆ ಅನುದಾನ ನಿಗದಿಪಡಿಸಲು ದಿನಾಂಕ:24-01-2023 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:03 ರಲ್ಲಿ ಚರ್ಚಿಸಿ ನಿರ್ಣಯಿಸಿರುತ್ತಾರೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು ದಿನಾಂಕ:27-03-2023 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ರವರು ಒಟ್ಟು ₹150-00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ **(ಅನುಬಂಧ-4)**

ಮುಂದುವರೆದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಚೆಕ್ ಸಂಖ್ಯೆ:073062 ದಿನಾಂಕ:28-03-2023 ರಂತೆ ₹73,50,000-00, ಹಾಗೂ ಚೆಕ್ ಸಂಖ್ಯೆ:073070 ದಿನಾಂಕ:28-03-2023 ರಂತೆ ₹73,50,000-00 ಒಟ್ಟು ಮೊತ್ತ ₹1,47,00,000-00 ಗಳನ್ನು ಬಿಡುಗಡೆ ಮಾಡಿರುತ್ತಾರೆ. **(ಅನುಬಂಧ-5)**

ದಿನಾಂಕ: 26-06-2023 ರಂದು ಬೀದರ ನಗರದ 1) ಮಾಹಾತ್ಮ ಗಾಂಧಿ ಪತ್ರಿಕಾ ಭವನ ಉದ್ಯಾನವನ ನೌಬಾದ, 2) ಬೊಂಗೊಂಡೆಶ್ವರ ಉದ್ಯಾನವ ವನ ಚಿದ್ರಿ, 3) ಅಟಲ್ ಉದ್ಯಾನವನ ಚಿದ್ರಿ, 4) ನಮೋ ಉದ್ಯಾನವನ ಚಿಕ್ಕಪೇಟ್, 5) ಪಂಡಿತ ದಿನ ದಾಯಲ ಉಪಾಧ್ಯಾಯ ಉದ್ಯಾನವನ ಚಿಕ್ಕಪೇಟ್, 6) ಸ್ವಾಮಿ ವಿವೇಕಾನಂದ ಉದ್ಯಾನವನ ಚಿಕ್ಕಪೇಟ್, 7) ಪಂಚಾಕ್ಷರ ಗವಾಯೀ ಉದ್ಯಾನವನ ಗುಲ್ಲೇರ ಹವೇಲಿ, 8) ಶ್ರೀ.ಸಿದ್ಧಾರೂಢ ಮಹಾಸ್ವಾಮಿ ಉದ್ಯಾನವನ ಮೈಲೂರ, 9) ವೀರ್ ಸಾವರ್ಕರ ಉದ್ಯಾನವನ ಹಳ್ಳದಕೇರಿ, 10) ರಾಮ ಕೃಷ್ಣ ಪರಮಾಹಂಸ ಉದ್ಯಾನವನ ಅಲಿಯಾಬಾದ್, 11) ಬಸವೇಶ್ವರ ಉದ್ಯಾನವನ ನೌಬಾದ, 12) ಬಸವಲಿಂಗ ಪಟ್ಟದೇವರ ಉದ್ಯಾನವನ ಚಿಟ್ಟಾ, 13) ಶಾಮಪ್ರಸಾದ ಮುಖರ್ಜಿ ಉದ್ಯಾನವನ ಹಳ್ಳದಕೇರಿ, 14) ಡಾ:ಗುರುಪಾದಪ್ಪ ನಾಗಮರಪಳ್ಳಿ ಉದ್ಯಾನವನ ಚಿಕ್ಕಪೇಟ್ ಮತ್ತು 15) ಡಾ:ಚನ್ನಬಸವ ದೇವರ ಉದ್ಯಾನವನ ಮೈಲೂರ. ನಿರ್ಮಿಸಲು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಸ್ಥಳ ಹಸ್ತಾಂತರ ಮಾಡಿರುತ್ತಾರೆ. **(ಅನುಬಂಧ-6)**

ದಿನಾಂಕ: 11-09-2023 ರಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರಿಗೆ ನೀಡಿರುವ ಕಾಮಗಾರಿಗಳ ಪ್ರಗತಿ ವರದಿಯಲ್ಲಿ ಮೇಲಿನ 15 ಉದ್ಯಾನವನಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಮತ್ತು ಬಿಡುಗಡೆಯಾದ ₹147-00 ಲಕ್ಷಗಳ ಅನುದಾನ ಬಳಕೆಯಾಗಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

ದಿನಾಂಕ 12-09-2023 ರಂದು 02 ಉದ್ಯಾನವನಗಳ ಸ್ಥಳ ಪರಿಶೀಲನೆ ಕೈಗೊಂಡಾಗ 1. ಚಿಕ್ಕಪೇಟ್ ಗ್ರಾಮದ ಸರ್ವೆ ನಂ. 38/1 ರಲ್ಲಿನ ನಮೋ ಉದ್ಯಾನವನ ಚಿಕ್ಕಪೇಟ್ ಕಾಮಗಾರಿಯನ್ನು ಕೈಗೊಂಡಿರವುದಿಲ್ಲವೆಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ವಿವರಿಸಿಸರುತ್ತಾರೆ ಈ ಕಾಮಗಾರಿ ಸ್ಥಳದ ಭಾವಚಿತ್ರ ಲಗತ್ತಿಸಿದೆ.

2. ಮೈಲೂರ ಗ್ರಾಮದ ಸರ್ವೆ ನಂ.38/2 (ಕರೋಡಿಮಾಲ್ ಲೇಔಟ್) ಉದ್ಯಾನವನದಲ್ಲಿ ಯೋಗ ಕಟ್ಟೆ ನಿರ್ಮಾಣ ಮಾಡಲಾಗಿರುತ್ತದೆ ಎಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ತಿಳಿಸಿದರು ಈ ಕಾಮಗಾರಿ ಸ್ಥಳದ ಭಾವಚಿತ್ರ ಲಗತ್ತಿಸಿದೆ. **(ಅನುಬಂಧ-7)**

**ಅಭಿಪ್ರಾಯ** : ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೇ, ನಗರಾಭಿವೃದ್ಧಿ ಪ್ರಾಧಿಕಾರವು ಈ ಕುರಿತು ಸರಕಾರದ ಅನುಮೋದನೆಯನ್ನು ಪಡೆಯವುದು ಅಗತ್ಯವಿರುತ್ತದೆ. ಬೀದರ ನಗರಾಭಿವೃದ್ಧಿ ಪ್ರಾಧಿಕಾರದವರು ಸರಕಾರದ ಅನುಮೋದನೆಯನ್ನು ಪಡೆಯದೇ ಇರುವುದು ಹಾಗೂ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ಇವರಿಗೆ ಹಸ್ತಾಂತರಿಸಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

**3. ಬೀದರ ನಗರದಲ್ಲಿ ಅಂತರ್ಜಲ ಟ್ಯಾಂಕ್ ಅಡಿಯಲ್ಲಿ ಗಣೇಶ ವಿಸರ್ಜನ ಟ್ಯಾಂಕ್ ನಿರ್ಮಾಣಕ್ಕಾಗಿ 200.00 ಲಕ್ಷ ಖರ್ಚು ಮಾಡಿರುತ್ತಾರೆ. ಇದು ಅವೈಜ್ಞಾನಿಕವಾಗಿದ್ದು ಇದಕ್ಕೆ ವಿರೋಧ ವ್ಯಕ್ತಪಡಿಸಿದರು ಕೂಡ ಈ ಕಾಮಗಾರಿಯನ್ನು ಕೈಗೆತ್ತಿಕೊಂಡು ಭ್ರಷ್ಟಾಚಾರ ಮಾಡಿರುತ್ತಾರೆ. ಈಗಾಗಲೇ ಸರ್ಕಾರ ಒಂದು ಹೊಸ ಗ್ರಂಥಾಲಯ 200.00 ಲಕ್ಷ ರೂಪಾಯಿ ಕಟ್ಟಡ ಕಾಮಗಾರಿ ಪ್ರಾರಂಭವಾಗಿದೆ. ಆದರೂ ಈ ಖರ್ಚು ತೋರಿಸಲಾಗಿದೆ.**

ಬೀದರ ನಗರದಲ್ಲಿ ಗಣೇಶ ಮೂರ್ತಿ ವಿಸರ್ಜನೆಗಾಗಿ ಹೊಂಡ ನಿರ್ಮಿಸಲು ದಿನಾಂಕ:24-01-2023 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:16(5)ರಲ್ಲಿ ಚರ್ಚಿಸಿ ನಿರ್ಣಯಿಸಲಾಗಿದ್ದು. ಗಣೇಶ ಮೂರ್ತಿ ವಿಸರ್ಜನೆಗಾಗಿ ಹೊಂಡ ನಿರ್ಮಾಣಕ್ಕಾಗಿ ₹200.00ಲಕ್ಷಗಳಿಗೆ ದಿನಾಂಕ:27-03-2023ರಂದು ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

ಮುಂದುವರೆದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರರವರು ಚೆಕ್ ಸಂಖ್ಯೆ:073053, ದಿನಾಂಕ:28.03.23 ರಂತೆ ರೂ:98,00,000-00 ಮತ್ತು ಚೆಕ್ ಸಂಖ್ಯೆ:073064 ದಿನಾಂಕ:28-03-2023ರಂತೆ ₹98,00,000-00 ಒಟ್ಟು ಮೊತ್ತ ₹1,96,00,000-00 ಗಳನ್ನು ಬಿಡುಗಡೆ ಮಾಡಿರುತ್ತಾರೆ. **(ಅನುಬಂಧ-1)**

ದಿನಾಂಕ: 26-06-2023 ರಂದು ಬೀದರ ನಗರದ ಹಳ್ಳದಕೇರಿ ಗ್ರಾಮದ ಸರ್ವೆ ನಂ. 52 ರಲ್ಲಿ ಗಣೇಶ ಮೂರ್ತಿ ವಿಸರ್ಜನೆ ಹೊಂಡ ನಿರ್ಮಿಸಲು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಸ್ಥಳ ಹಸ್ತಾಂತರ ಮಾಡಿರುತ್ತಾರೆ. **(ಅನುಬಂಧ-8)**

ದಿನಾಂಕ:11-09-2023 ರಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರಿಗೆ ನೀಡಿರುವ ಕಾಮಗಾರಿಗಳ ಪ್ರಗತಿ ವರದಿಯಲ್ಲಿ ಗಣೇಶ ಮೂರ್ತಿ ವಿಸರ್ಜನೆ ಹೊಂಡ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ₹200.00ಲಕ್ಷಗಳು, ವೆಚ್ಚದಲ್ಲಿ ಹೊಂಡ ತೆಗೆಯುವ ಕೆಲಸ ಪ್ರಗತಿಯಲ್ಲಿರುತ್ತದೆ ಮತ್ತು ಬಿಡುಗಡೆಯಾದ ₹196.00ಲಕ್ಷಗಳ ಅನುದಾನ ಬಳಕೆಯಾಗಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

ದಿನಾಂಕ 12-09-2023 ರಂದು ಸ್ಥಳ ಪರಿಶೀಲನೆ ಕೈಗೊಂಡಾಗ ಸದರಿ ಸ್ಥಳದಲ್ಲಿ ಗಣೇಶ ಮೂರ್ತಿ ವಿಸರ್ಜನೆ ಹೊಂಡ ತೆಗೆಯುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಸ್ಥಳ ಪರಿವೀಕ್ಷಣೆಯ ಭಾವ ಚಿತ್ರಗಳನ್ನು ಲಗತ್ತಿಸಿದೆ.

**ಅಭಿಪ್ರಾಯ** : ಬೀದರ ನಗರದ ಹಳ್ಳದಕೇರಿಯು ನಗರಸಭೆ ಬೀದರ ವ್ಯಾಪ್ತಿಯಲ್ಲಿ ಇದ್ದು, "ಸರಕಾರಿ" ಎಂದು ದಾಖಲಾತಿಗಳಲ್ಲಿ ನಮೂದಾಗಿರುವುದರಿಂದ ಯಮಾನುಸಾರ ಕೆರೆ ಪರಿಸರದಲ್ಲಿ ಯಾವುದೇ ಕಾಮಗಾರಿಯನ್ನು ಕೈಕೊಳ್ಳುವ ಪೂರ್ವದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಕಡ್ಡಾಯವಾಗಿರುತ್ತದೆ. ಅಲ್ಲದೇ, ಗಣೇಶ ಮೂರ್ತಿ ವಿಸರ್ಜನೆ ಹೊಂಡ ಕಾಮಗಾರಿಯನ್ನು ಕೈಕೊಳ್ಳುವ ಪೂರ್ವದಲ್ಲಿ ಪರಿಸರ ಪ್ರಭಾವದ ಮೌಲ್ಯಮಾಪನ (Environment Impact Assessment) ಅಧ್ಯಯನವನ್ನು ಕೈಕೊಂಡಿರುವುದು ಕಂಡುಬರದೇ ಇರುವುದರಿಂದ ಕಾಮಗಾರಿಯ ಅವೈಜ್ಞಾನಿಕತೆ ಕುರಿತು (Environment Impact Assessment) ವರದಿ ಅಗತ್ಯವಿದೆ. ಮುಂದುವರೆದು, ಗಣೇಶ ಮೂರ್ತಿ ವಿಸರ್ಜನೆ ಹೊಂಡ ಕಾಮಗಾರಿ ಪ್ರಾರಂಭವಾಗದದಿರುವುದರಿಂದ ಅನುದಾನದ ದುರ್ಬಳಕೆ ಅಥವಾ ಭ್ರಷ್ಟಾಚಾರ ಪ್ರಮಯ ಉದ್ಭವಿಸುವುದಿಲ್ಲ.

**4. ಬೀದರ ನಗರದಲ್ಲಿ ಗ್ರಂಥಾಲಯ ನಿರ್ಮಾಣ ಮಾಡಲು ₹20.00 ಲಕ್ಷ, ಗ್ರಂಥಾಲಯ ಕಟ್ಟಡ ಕಟ್ಟದೇ ಹಣ ಪೂರ್ತಿ ದುರ್ಬಳಕೆ ಮಾಡಿಕೊಂಡಿರುತ್ತಾರೆ.**

ದಿನಾಂಕ:11-09-2023 ರಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರಿಗೆ ನೀಡಿರುವ ಕಾಮಗಾರಿಗಳ ಪ್ರಗತಿ ವರದಿಯಲ್ಲಿ ಬಸ್ ತಂಗುದಾಣ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ ಅಂದಾಜು ಮೊತ್ತ ₹30.00 ಲಕ್ಷಗಳು ಮತ್ತು ಸಾರ್ವಜನಿಕ ಗ್ರಂಥಾಲಯ ಕಾಮಗಾರಿಯ ಅಂದಾಜು ಮೊತ್ತ ₹20.00 ಲಕ್ಷಗಳು, ಪ್ರಾರಂಭ ಮಾಡುವ ಹಂತದಲ್ಲಿ ಇರುತ್ತದೆ ಮತ್ತು ಬಿಡುಗಡೆಯಾದ **₹49.00 ಲಕ್ಷಗಳ ಅನುದಾನ ಬಳಕೆಯಾಗಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.**

ದಿನಾಂಕ:12–09–2023 ರಂದು ಸ್ಥಳ ಪರಿಶೀಲನೆ ಕೈಗೊಂಡಾಗ, ಸದರಿ ಸ್ಥಳದಲ್ಲಿ ಸಾರ್ವಜನಿಕ ಗ್ರಂಥಾಲಯ, ಸಾರ್ವಜನಿಕ ಶೌಚಾಲಯ ಹಾಗೂ ಬಸ್ ತಂಗುದಾಣ ಕಾಮಗಾರಿಗಳು ಇನ್ನು ಪ್ರಾರಂಭಿಸಿರುವುದಿಲ್ಲ ಸ್ಥಳ ಪರಿವೀಕ್ಷಣೆಯ ಭಾವ ಚಿತ್ರಗಳನ್ನು ಲಗತ್ತಿಸಿದೆ.

**ಅಭಿಪ್ರಾಯ** : ಬೀದರ ನಗರಾಭಿವೃದ್ಧಿ ಪ್ರಾಧಿಕಾರದವರು ಸರಕಾರದ ಅನುಮೋದನೆಯನ್ನು ಪಡೆಯದೇ ಇರುವುದು ಹಾಗೂ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ಇವರಿಗೆ ಹಸ್ತಾಂತರಿಸಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

5. **ಬೀದರ ನಗರದ ಪಾಪನಾಶ ಉದ್ಯಾನವನ ಕಾಮಗಾರಿಗಾಗಿ 200.00 ಲಕ್ಷ ರೂಪಾಯಿ ಖರ್ಚು ಮಾಡಿರತ್ತಾರೆ ಈ ಉದ್ಯಾನವನ ಹಾಗೂ ಅಭಿವೃದ್ಧಿ ಕೆಲಸ ನಗರಸಭೆ ವ್ಯಾಪ್ತಿಗೆ ಬರುತ್ತಿದ್ದು, ಇದಕ್ಕೆ ಪರವಾನಿಗೆ ಪಡೆಯದೇ ಈ ಹಣವನ್ನು ಉಪಯೋಗ ಮಾಡಿರುತ್ತಾರೆ. ಆದರೆ ಯಾವುದೇ ಕಾಮಗಾರಿ ನಡೆದಿರುವುದಿಲ್ಲ.**

ಬೀದರ ನಗರದ ಐತಿಹಾಸಿಕ ಪಾಪನಾಶ ಕೆರೆಯ ಅಭಿವೃದ್ಧಿ ಕುರಿತು ಮಾನ್ಯ ಶ್ರೀ.ರಘುನಾಥರಾವ ಮಲ್ಕಾಪೂರೆ ಶಾಸಕರು, ಕರ್ನಾಟಕ ವಿಧಾನ ಪರಿಷತ್ ಬೀದರ ರವರು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ ರವರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಭೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ಸದರಿ ಪ್ರಾಧಿಕಾರದ ಕೆರೆ ಅಭಿವೃದ್ಧಿ ನಿಧಿಯಿಂದ ₹2.00(ಕೋಟಿ) ವೆಚ್ಚದಲ್ಲಿ 8–ಹಂತಗಳಲ್ಲಿ ₹25.00(ಲಕ್ಷಗಳಿಗೆ) ಅಂದಾಜು ಪತ್ರಕ್ಕೆಯನ್ನು Project Management Consultantರವರಿಂದ ತಯಾರಿಸಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಕಾಮಗಾರಿಯನ್ನು ಕೈಗೊಂಡು, ಸದರಿ ಕಾಮಗಾರಿಗಳು ಹಂತ ಹಂತವಾಗಿ ಬಿಡುಗಡೆಗೊಳಿಸಲು ಮತ್ತು ಮೊದಲನೇಯ ಹಂತದ ₹25.00(ಲಕ್ಷಗಳನ್ನು) ಜಿಲ್ಲಾಧಿಕಾರಿಗಳು, ಬೀದರ ರವರ ಹೆಸರಿಗೆ ಅನುದಾನವನ್ನು ಸಂದಾಯ ಮಾಡಲು ಮತ್ತು ಉಳಿದ ಅನುದಾನವನ್ನು 7–ಹಂತಗಳ ಕಾಮಗಾರಿಗಳು ಪೂರ್ಣಗೊಂಡ ನಂತರ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸಲು" ದಿನಾಂಕ:19–04–2022ರಂದು ಜರುಗಿದ ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:06ರಂತೆ ನಿರ್ಣಯಿಸಿರುತ್ತಾರೆ.

ಮುಂದುವರೆದು, ಪಾಪನಾಶ ಉದ್ಯಾನವನದ ಲ್ಯಾಟರೈಟ್ ಪಾದಚಾರಿ ಮಾರ್ಗ ಅಭಿವೃದ್ಧಿಗೆ ₹85.00ಲಕ್ಷಗಳು, ಪಾಪನಾಶ ಉದ್ಯಾನವನದ ಗ್ರೀಲ್ ಅಳವಡಿಸುವುದು ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿಗೆ ₹95.00 ಲಕ್ಷಗಳಿಗೆ ದಿನಾಂಕ 10–02–2023 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ದಿನಾಂಕ:10–02–2023 ಮತ್ತು ಪಾಪನಾಶ ಉದ್ಯಾನವನದ ಸ್ಟ್ರೀಟ್ ಲೈಟ್ ಮತ್ತು ಮಿನಿ ಮಾಸ್ಟ ಅಳವಡಿಸಲು ₹20.00 ಲಕ್ಷಗಳಿಗೆ ಆಯುಕ್ತರ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. **(ಅನುಬಂಧ–9)**

ಮುಂದುವರೆದು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರು ಚೆಕ್ ಸಂಖ್ಯೆ:321065, ದಿ:25–05–2022 ರಂತೆ ₹25,00,000–00, ಚೆಕ್ಕ ಸಂಖ್ಯೆ:073055 ದಿನಾಂಕ:28–03–2023 ರಂತೆ ₹1,31,80,000–00 ಮತ್ತು ಚೆಕ್ ಸಂಖ್ಯೆ:527862 ದಿನಾಂಕ:28–03–2023 ರಂತೆ ₹39,20,000–00 ಒಟ್ಟು ಮೊತ್ತ ₹1,96,00,000–00 ಗಳನ್ನು ಬಿಡುಗಡೆ ಮಾಡಿರುತ್ತಾರೆ.(ಪ್ರತಿ ಲಗತ್ತಿಸಿದೆ)

ದಿನಾಂಕ:20–01–2023ರಂದು ಬೀದರ ನಗರದ ಬಾಗೇಕಾರಂಜಾ ಸರ್ವೆ ನಂ.38/*/1 ರಲ್ಲಿ ಪಾಪನಾಶ ಉದ್ಯಾನವನದ ಲ್ಯಾಟರೈಟ ಪಾದಚರಿ ಮಾರ್ಗ, ಗ್ರೀಲ ಮತ್ತು ಸ್ಟಿಟ್ ಲೈಟ್ ನಿರ್ಮಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರ ಸಭೆ, ಬೀದರರವರು ಸ್ಥಳ ಹಸ್ತಾಂತರ ಮಾಡಿರುತ್ತಾರೆ. (ಪ್ರತಿ ಲಗತ್ತಿಸಿದೆ).

ದಿನಾಂಕ:11–09–2023 ರಂದು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಬೀದರ ರವರು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ರವರಿಗೆ ನೀಡಿರುವ ಕಾಮಗಾರಿಗಳ ಪ್ರಗತಿ ವರದಿಯಲ್ಲಿ ಪಾಪನಾಶ ಉದ್ಯಾನವನ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ₹200.00ಲಕ್ಷಗಳ ಕಾಮಗಾರಿಯು ಪ್ರಗತಿಯಲ್ಲಿದ್ದು ಮತ್ತು

1833 77



ಬಿಡುಗಡೆಯಾದ ₹196.00 ಲಕ್ಷಗಳ ಅನುದಾನದಲ್ಲಿ ₹108.99 ಲಕ್ಷಗಳ ಬಳಕೆಯಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ದಿನಾಂಕ:12-09-2023 ರಂದು ಸ್ಥಳ ಪರಿಶೀಲನೆ ಕೈಗೊಂಡಾಗ ಸದರಿ ಸ್ಥಳದಲ್ಲಿ ಪಾಪನಾಶ ಉದ್ಯಾನವನದ ಲ್ಯಾಟರೈಟ ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸ್ಥಳ ಪರಿವೀಕ್ಷಣೆಯ ಭಾವ ಚಿತ್ರಗಳನ್ನು ಲಗತ್ತಿಸಿದೆ.

**ಅಭಿಪ್ರಾಯ** : ಬೀದರ ನಗರದ ಪಾಪನಾಶನ ನಗರಸಭೆ ಬೀದರ ವ್ಯಾಪ್ತಿಯಲ್ಲಿ ಇದ್ದು, ನಿಯಮಾನುಸಾರ ಕೆರೆ ಪರಿಸರದಲ್ಲಿ ಯಾವುದೇ ಕಾಮಗಾರಿಯನ್ನು ಕೈಕೊಳ್ಳುವ ಪೂರ್ವದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಕಡ್ಡಾಯವಾಗಿರುತ್ತದೆ. ಅದಲ್ಲದೇ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುದಾನವನ್ನು ಬೇರೆ ಕಾರ್ಯಕ್ಕೆ ವಂತಿಕೆ ನೀಡಲು ಅವಕಾಶವಿದೆ. ಆದರೆ ಈ ಕುರಿತು ಸರಕಾರದ ಅನುಮೋದನೆಯನ್ನು ಪಡೆಯುವುದು ಕಡ್ಡಾಯವಿರುತ್ತದೆ. ಸರಕಾರದ ಅನುಮೋದನೆಯನ್ನು ಪಡೆಯದೇ ಅನುದಾನವನ್ನು ಬಳಕೆಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿದೆ. ನಾನು ಕೈಗೊಂಡ ಸ್ಥಳ ತನಿಖಾ ಸಮಯದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಪಡೆಯುವವರೆಗೂ ಕಾಮಗಾರಿಯನ್ನು ಸ್ಥಗಿತಗೊಳಿಸಲು ನಿರ್ದೇಶಿಸಿರುತ್ತೇನೆ.

6. **ಪೋಲಿಸ್ ಇಲಾಖೆಗೆ ಹೈಡ್ರೋಲಿಕ್ ಡಿಸ್ಟೆಲ್ ರಿಕವರಿ ವಾಹನಕ್ಕೆ ಯಾವುದೇ ಬೇಡಿಕೆ ಇಲ್ಲದಿದ್ದರೂ ಅದಕ್ಕಾಗಿ 25.00 ಲಕ್ಷ ರೂಪಾಯಿ ಪಾವತಿ ಮಾಡಿರುತ್ತಾರೆ.**

   ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುದಾನವನ್ನು ಬೇರೆ ಕಾರ್ಯಕ್ಕೆ ವಂತಿಕೆ ನೀಡಲು ಅವಕಾಶವಿದೆ ಆದರೆ ಈ ಕುರಿತು ಸರಕಾರದ ಅನುಮೋದನೆಯನ್ನು ಪಡೆಯುವುದು ಕಡ್ಡಾಯವಿರುತ್ತದೆ. ಪೋಲೀಸ ಇಲಾಖೆಯ ಬೇಡಿಕೆಯ ಆಧಾರದ ಮೇರೆಗೆ ಅನುದಾವನ್ನು ನೀಡಲಾಗಿರುತ್ತದೆ. ಪರಂತು, ಸರಕಾರದ ಅನುಮೋದನೆಯನ್ನು ಪಡೆಯದೇ ಅನುದಾನವನ್ನು ಬಳಕೆಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿದೆ.

7. **ನಗರದ ಗೋರನಳ್ಳಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಾಣದ ಹಂತದಲ್ಲಿರುವ ವಸತಿ ನಿವೇಶನ (ಲೇಔಟ) ಪೂರ್ಣಗೊಳಿಸದೆ ಸಾರ್ವಜನಿಕರಿಂದ ಹೆಚ್ಚಿನ ಹಣ ಪಡೆದು ನಿಯಮಾಬಾಹೀರವಾಗಿ ಹಾಗೂ ಪ್ರಾಧಿಕಾರದ ಯಾವೊಬ್ಬ ಸದಸ್ಯರ ಗಮನಕ್ಕೆ ತರದೆ ಅಲ್ಲಿರುವ ಎಲ್ಲಾ ವಸತಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. ಮತ್ತು ಅವರಿಗೆ ನಿಗದಿತ ಕಾಲಾವಧಿಯೊಳಗೆ ನೋಂದಣಿ ಮಾಡಿಕೊಳ್ಳದಿದ್ದರೆ ತಾವು ಕಟ್ಟಿದ ಹಣವನ್ನೆಲ್ಲ ಮುಟ್ಟುಗೋಲು ಹಾಕುತ್ತೇನೆ ಎಂದು ಹೇಳಿ ಅವರಿಂದ ಹೆಚ್ಚಿನ ಹಣ ಪಡೆದಿರುತ್ತಾರೆ. ಈ ನಿವೇಶನ ಸ್ಥಳದಲ್ಲಿ ರಸ್ತೆ, ಚರಂಡಿ, ವಿದ್ಯುತ್, ನೀರು ಯಾವ ಸೌಲಭ್ಯ ಇಲ್ಲದ ಕಾರಣ ಆ ಜನರು ನೋಂದಣಿ ಮಾಡಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಅದರ ಸದುಪಯೋಗವನ್ನು ಆಯುಕ್ತರಾಗಿದ್ದ ಅಭಯ ಕುಮಾರ್ ಪಡೆದು ಹೆಚ್ಚಿನ ಹಣವನ್ನು ಪಡೆದಿರುತ್ತಾರೆ ಎಂಬ ಆರೋಪ ಕೇಳಿ ಬರುತ್ತಿದೆ.**

   ಶ್ರೀ ಶಿವಮೂರ್ತಿ ತಂದೆ ಸಂಗ್ರಾಮಪ್ಪ ಶ್ರೀ ಫಾಳೇಪ್ಪ ತಂದೆ ಸಂಗ್ರಾಮಪ್ಪ ಹಾಗೂ ಶ್ರೀಮತಿ ಕಲಾವತಿ ತಂದೆ ಸಂಗ್ರಾಮಪ್ಪ ಇವರ ಮಾಲೀಕತ್ವದಲ್ಲಿರುವ ಗೋರನಳ್ಳಿ (ಬಿ) ಗ್ರಾಮದ ಸರ್ವೆ ನಂ 21/1ರ ವಿಸ್ತೀರ್ಣ 19 ಎಕರೆ 26 ಗುಂಟೆ ಪ್ರದೇಶಕ್ಕೆ ರೈತರ ಸಹಭಾಗಿತ್ವದ ಯೋಜನೆ ಕೈಗೊಳ್ಳಲು ದಿನಾಂಕ: 13-07-2015 ರಂದು ಭೂ ಭೂಮಾಲಿಕರು ಅರ್ಜಿ ಸಲ್ಲಿಸಿರುವದರಿಂದ ದಿನಾಂಕ:02-07-2006ರ ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 20 ರಲ್ಲಿ ಗೋರನಳ್ಳಿ (ಬಿ) ಗ್ರಾಮದ ಸರ್ವೆ ನಂ 21/1ರ ವಿಸ್ತೀರ್ಣ 19 ಎಕರೆ 26 ಗುಂಟೆ ಪೈಕಿ 17ಎಕರೆ 20 ಗುಂಟೆ ಪ್ರದೇಶಕ್ಕೆ ರೈತರ ಸಹಭಾಗಿತ್ವದ ಯೋಜನೆ ಕೈಗೊಳ್ಳಲು ಭೂ ಮಾಲೀಕರು ವಿನಂತಿಸಿರುವುದಾಗಿ ತಿಳಿಸಿ ಸಭೆಯಲ್ಲಿ ವಸತಿ ಯೋಜನೆ ಹಮ್ಮಿಕೊಳ್ಳುವ ಕುರಿತು ವಿಷಯವನ್ನು ಮಂಡಿಸಲಾಗಿತ್ತು.

   ಸಭೆಯಲ್ಲಿ ಪ್ರಾಧಿಕಾರದ ವತಿಯಿಂದ ರೈತರ ಸಹಭಾಗಿತ್ವದ ವಸತಿ ಯೋಜನೆ ಹಮ್ಮಿಕೊಳ್ಳುವ ಕುರಿತು ತಯಾರಿಸಿಲಾದ ನಕ್ಷೆಯನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಗಿದ್ದು ಅದರಂತೆ, ರೈತರೊಂದಿಗೆ ಒಡಂಬಡಿಕೆ ಮಾಡಿಕೊಡಲು ಹಾಗೂ ಯೋಜನೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪತ್ರಿಕೆಗಳು ವಿವಿಧ ಇಲಾಖೆಗಳಿಂದ ತಯಾರಿಸಿಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ರದೆ. ಆಯುಕ್ತರು ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಭೂ ಮಾಲೀಕರೊಂದಿಗೆ ದಿನಾಂಕ: 03.12.2016 ರಂದು ಮಾಡಿಕೊಂಡ ನೋಂದಣಿಯಲ್ಲಿ ವಿನ್ಯಾಸದ ಒಟ್ಟು ವಿಸ್ತೀರ್ಣ 70623.0 ಚದರ ಮೀಟರ

**ವಿನ್ಯಾಸದಲ್ಲಿ ವಿವಿಧ ಅಳತೆಯ ಒಟ್ಟು 268** ನಿವೇಶನಗಳನ್ನು ರಚಿಸಿದ್ದು, ಅವುಗಳ ಪೈಕಿ ಭೂ ಮಾಲೀಕರಿಗೆ 146 ಹಾಗೂ ಪ್ರಾಧಿಕಾರಕ್ಕೆ 122 ನಿವೇಶನಗಳನ್ನು ನೋಂದಣಿ ಮಾಡಿಕೊಳ್ಳಲಾಗಿರುತ್ತದೆ.

ತದನಂತರ ಪುನಃ ದಿನಾಂಕ: 12.01.2018 ರಂದು ಮಾಡಿಕೊಂಡ ನೋಂದಣಿಯಲ್ಲಿ **ವಿನ್ಯಾಸದ ಒಟ್ಟು ವಿಸ್ತೀರ್ಣ 70840 ಚದರ ಮೀಟರ ವಿನ್ಯಾಸದಲ್ಲಿ ವಿವಿಧ ಅಳತೆಯ ಒಟ್ಟು 277** ನಿವೇಶನಗಳನ್ನು ರಚಿಸಿದ್ದು, ಅವುಗಳ ಪೈಕಿ ಪ್ರಾಧಿಕಾರಕ್ಕೆ 138 ನಿವೇಶನಗಳನ್ನು ನೋಂದಣಿ ಮಾಡಿಕೊಂಡಿರುತ್ತಾರೆ. 9*12 ಮೀಟರ ವಿಸ್ತೀರ್ಣದ 01 ನಿವೇಶನಕ್ಕೆ ಭೂ ಮಾಲೀಕರಿಂದ ಶೇ.50% ಮೊತ್ತ ಪಾವತಿಸಿಕೊಂಡು ನೀಡುವಂತೆ ನೋಂದಣಿ ಮಾಡಿಕೊಂಡಿರುತ್ತಾರೆ.
ಮುಂದುವರೆದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ:ಡಿಟಿಸಿಪಿ/196/ಎಮ್.ಎಸ್.ಸಿ./2016-17 ದಿನಾಂಕ: 09.02.2018 ರನ್ವಯ ತಾಂತ್ರಿಕವಾಗಿ ಪರಿಶೀಲಿಸಿ ಕೆಲವೊಂದು ಮಾರ್ಪಾಡುಗಳು ಕಂಡು ಬಂದ ಹಿನ್ನಲೆಯಲ್ಲಿ ವಿನ್ಯಾಸ ನಕ್ಷೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆನ್ವಯ ಉದ್ಯಾನವನ/ಬಯಲು ಪ್ರದೇಶಕ್ಕಾಗಿ ಶೇ. 15 ಮತ್ತು ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಶೇ. 10 ರಷ್ಟು ವಿಸ್ತೀರ್ಣ ಕಾಯ್ದಿರಿಸಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಶೇ. 30 ರಷ್ಟು ನಿವೇಶನಗಳನ್ನು ಅಳವಡಿಸಿ **ವಿನ್ಯಾಸದ ಒಟ್ಟು ವಿಸ್ತೀರ್ಣ 69604.96 ಚದರ ಮೀಟರ ವಿನ್ಯಾಸದಲ್ಲಿ ವಿವಿಧ ಅಳತೆಯ ಒಟ್ಟು 271 ನಿವೇಶನಗಳನ್ನು** (ಇವುಗಳಲ್ಲಿ 27 ಮೂಲ ನಿವೇಶನಗಳು ಇರುತ್ತವೆ) ರಚಿಸಿ ಅನುಮೋದನೆ ನೀಡಲಾಗಿರುತ್ತದೆ.
ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರಿಂದ ದಿನಾಂಕ: 09.02.2018 ರಂದು ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿರುತ್ತದೆ. ಆದರೆ ವಿನ್ಯಾಸಕ್ಕೆ ಅನುಮೋದನೆ ಪಡೆಯುವುದಕ್ಕಿಂತ ಮುಂಚಿತವಾಗಿಯೇ ಪ್ರಾಧಿಕಾರದ ಪಾಲಿನ ನಿವೇಶನಗಳನ್ನು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ: 03.12.2016 ಹಾಗೂ 12.01.2018 ರಂದು ನೋಂದಣಿ ಆಗಿರುವುದು ಕಂಡು ಬರುತ್ತದೆ.
ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಟಿಸಿಪಿ/41/ಎಂಐಎಸ್‌ಸಿ/2016-17 ದಿನಾಂಕ 09.02.2018ರನ್ವಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಉದ್ಯಾನವನ / ಬಯಲು ಪ್ರದೇಶಕ್ಕಾಗಿ ಶೇ. 15 ಮತ್ತು ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಶೇ 10 ರಷ್ಟು ವಿಸ್ತೀರ್ಣ ಕಾಯ್ದಿರಿಸಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಶೇ. 30 ರಷ್ಟು ನಿವೇಶನಗಳನ್ನು ಅಳವಡಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ನಿಯಮ 16 ರನ್ವಯ ತಾಂತ್ರಿಕವಾಗಿ ಪರಿಶೀಲಿಸಿ ಅನುಮೋದನೆ ನೀಡಿದ ನಕ್ಷೆಯಲ್ಲಿ ವಸತಿಗಾಗಿ ವಿಸ್ತೀರ್ಣ 25532.79 ಚದರ ಮೀಟರ ಶೇ. 42.41 ನಾಗರೀಕ ಸೌಲಭ್ಯಕ್ಕಾಗಿ ವಿಸ್ತೀರ್ಣ 6146.12 ಚ.ಮೀ ಶೇ. 10.21, ಉದ್ಯಾನವನಕ್ಕಾಗಿ ವಿಸ್ತೀರ್ಣ 13365.36 ಚ.ಮೀ. ಶೇ. 22.20 ಹಾಗೂ ರಸ್ತೆಗಾಗಿ ವಿಸ್ತೀರ್ಣ 15152.22 ಚ.ಮೀಟರ ಶೇ. 25.18 ಕಾಯ್ದಿರಿಸಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಉದ್ಯಾನವನ / ಬಯಲು ಪ್ರದೇಶಕ್ಕಾಗಿ ಶೇ. 15 ಮತ್ತು ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಶೇ.10 ರಷ್ಟು ವಿಸ್ತೀರ್ಣ ಕಾಯ್ದಿರಿಸಬೇಕಾಗಿದ್ದು; ಆದರೆ, ಸದರಿ ಪ್ರಾಧಿಕಾರದವರು ವಸತಿ ಯೋಜನೆಯಲ್ಲಿ ಕಾಯ್ದಿರಿಸಿದ ನಾಗರೀಕ ಸೌಲಭ್ಯದ ಉದ್ದೇಶಕ್ಕಾಗಿ ವಿಸ್ತೀರ್ಣ 6146.12 ಚ.ಮೀ. (ಶೇ.10.21) ರಿಂದ ವಿಸ್ತೀರ್ಣ 3014.22 ಚ.ಮೀ. (ಶೇ.5.01) ನಿಗದಿಪಡಿಸಿ, ವಸತಿಗಾಗಿ ಕಾಯ್ದಿರಿಸಿದ ವಿಸ್ತೀರ್ಣ 25532.79 ಚ.ಮೀ (ಶೇ.42.41) ರಿಂದ ವಿಸ್ತೀರ್ಣ 29259.19 ಚ.ಮೀ. (ಶೇ. 47.61) ಕ್ಕೆ ಹೆಚ್ಚಿಸಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿ ಸ್ಥಳದಲ್ಲಿ ಹೆಚ್ಚುವರಿಯಾಗಿ 14 ವಸತಿ ನಿವೇಶನಗಳನ್ನು ಅಳವಡಿಸಿ ಮಾರ್ಪಡಿಸಿರುವುದ ಗುರುತರವಾದ ಲೋಪವಾಗಿರುತ್ತದೆ. ಮುಂದುವರೆದು ಸದರಿ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಮಾನ್ಯ ನಿದೇಶಕರಿಂದ ಅನುಮೋದನೆ ಪಡೆಯುವ ಮುಂಚಿತವಾಗಿ ಮಾರ್ಪಡಿತ ವಿನ್ಯಾಸ ನಕ್ಷೆಯಂತೆ ಭೂ ಮಾಲಿಕರ ಪಾಲಿನ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಪ್ರಾಧಿಕಾರದ ಪಾಲಿನ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ / ಹರಾಜು ಮೂಲಕ ವಿಲೇವಾರಿ ಮಾಡಿರುವುದು ಕಂಡುಬಂದಿರುತ್ತದೆ.

**ಅಭಿಪ್ರಾಯ** : ನಗರಾಭಿವೃದ್ಧಿ ಪ್ರಾಧಿಕಾರ, ಬೀದರ ಇವರು, ನಿವೇಶನ ವಿನ್ಯಾಸಕ್ಕೆ ಅನುಮೋದನೆ ಪಡೆಯುವುದಕ್ಕಿಂತ ಮುಂಚಿತವಾಗಿಯೇ ಪ್ರಾಧಿಕಾರದ ಪಾಲಿನ ನಿವೇಶನಗಳನ್ನು ಮಾರಾಟ ಪ್ರಕ್ರಿಯೆಯನ್ನು ಕೈಕೊಂಡಿರುವುದ ಸರಕಾರದ ನಿಯಮಗಳ ಉಲ್ಲಂಘನೆಯಾಗಿದೆ, ನಿವೇಶನಗಳ ಅನುಮೋದನೆ ಹಾಗೂ ಅಭಿವೃದ್ಧಿಯಾಗದೇ ಮಾರಾಟ ಪ್ರಕ್ರಿಯೆಯಿಂದ ನಿವೇಶನಗಳ ಪ್ರಕಲ್ಪಿತ ನಷ್ಟವಾಗಿರುವ ಸಾಧ್ಯತೆವಿದೆ. ಅಲ್ಲದೇ ಬಡಾವಣೆ ಅಭಿವೃದ್ಧಿಯ ವೆಚ್ಚದಲ್ಲಿ ಕಾಲಕ್ರಮೇಣ ಏರಿಕೆಯಾಗುವುದರಿಂದ ಆರ್ಥಿಕ ನಷ್ಟದ ಸಾಧ್ಯತೆ ಇದೆ. ಮುಂದುವರೆದು, ನಿವೇಶನ ರಚನೆಯಲ್ಲಿ ಅನುಮಾನಗಳಿಗೆ ಹಾಗೂ ವ್ಯಾಜ್ಯಕ್ಕೆ ಎಡೆಮಾಡಿಕೊಟ್ಟಂತ್ತಾಗುತ್ತದೆ. ನಿವೇಶನ ನಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದಿರುರವುದನ್ನು ಯಾವುದೇ ಹಂತದಲ್ಲಿ ಮಾರ್ಪಡಿಸಲು ಅವಕಾಶವಿರುವುದಿಲ್ಲದಿದ್ದೂ, ನಿಯಮಗಳನ್ನು ಪರಿಗಣಿಸದೇ, ನಾಗರೀಕ ಸೌಲಭ್ಯಕ್ಕೆ ನಿಗಧೀತ ಸ್ಥಳವನ್ನು ಮಾರ್ಪಡಿಸಿ, ಹೆಚ್ಚುವರಿಯಾಗಿ 14 ವಸತಿ ನಿವೇಶನಗಳನ್ನು ಅಳವಡಿಸಿರುವುದು ಗುರುತರವಾದ ಲೋಪವಾಗಿರುತ್ತದೆ
ಮುಂದುವರೆದು, ನಗರಾಭಿವೃದ್ಧಿ ಪ್ರಾಧಿಕಾರ ಬೀದರ ಇವರು, ನಿವೇಶನ ಹಂಚಿಕೆ ಪ್ರಕ್ರಿಯೆಯನ್ನು ಲಾಟರಿ ಮೂಲಕ ಕೈಕೊಂಡಿರುವುದರಿಂದ; ಹಾಗೂ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣಗೊಳಿಸಿರುವ ಹಿನ್ನಲೆಯಲ್ಲಿ; ಈ ಪ್ರಕ್ರಿಯೆಯನ್ನು ಅವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಬಾಬು ವಾಲಿ ಹಾಗೂ ಆಯುಕ್ತರಾದ ಶ್ರೀ ಅಭಯಕುಮಾರ್ ಇವರ ವಿರುದ್ಧ ಶ್ರೀ ಅರವಿಂದಕುಮಾರ ಅರಳಿ, ಶಾಸಕರು, ವಿಧಾನಪರಿಷತ್, ಇವರು ಸರ್ಕಾರಕ್ಕೆ ಸಲ್ಲಿಸಿರುವ ದೂರಿನನ್ವಯ ದೂರಿನಲ್ಲಿರುವ ಪ್ರತಿಯೊಂದು ಅಂಶಗಳ ಮೇಲೆ ತನಿಖಾ ತಂಡದ ವರದಿ ಹಾಗೂ ದಾಖಲಾತಿಗಳೊಂದಿಗೆ ನನ್ನ ಅಭಿಪ್ರಾಯವನ್ನು ಇದರೊಂದಿಗೆ ಲಗತ್ತಿಸಿ ತಮ್ಮ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

**ಪ್ರಾದೇಶಿಕ ಆಯುಕ್ತರು,**
**ಕಲಬುರಗಿ ವಿಭಾಗ, ಕಲಬುರಗಿ**

ಅನುಬಂಧ - 2

98

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 187 ಗುಅಪ್ರಾ 2023

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12.01.2024.

**ಕಾರಣ ಕೇಳುವ ನೋಟೀಸ್** R.P.A.D

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ತಾವು ಬೀದರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರಾಗಿದ್ದ ಅವಧಿಯಲ್ಲಿನ ಆರೋಪಗಳ ಕುರಿತಂತೆ ನೀಡಿರುವ ದೂರಿಗೆ ಸಂಬಂಧಿಸದಂತೆ ಬೀದರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಿನಾಂಕ:16.12.2022, 24.01.2023 ಮತ್ತು 21.03.2023ರಂದು ಜರುಗಿದ ಸಭೆಯ ನಡವಳಿಗಳು ನಿಯಮಾನುಸಾರವಾಗಿ ಇರುವ ಕುರಿತು ಹಾಗೂ ಬೀದರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ 03 ವರ್ಷಗಳಲ್ಲಿ ಅನುಮತಿ ನೀಡಲಾಗಿರುವ ಬಡಾವಣೆಗಳ ವಿವರ, ಸಾರ್ವಜನಿಕರಿಗೆ ಹಂಚಿಕೆ ಮಾಡಿರುವ ಬಿಡಿ, ಮೂಲೆ, ವಾಣಿಜ್ಯ ಮತ್ತು ಸಿ.ಎ. ನಿವೇಶನಗಳ ವಿವರ ಹಾಗೂ ಪ್ರಾಧಿಕಾರದಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳ ಬಗ್ಗೆ ಕೂಲಂಕಷವಾಗಿ ಸ್ಥಳ ಪರಿಶೀಲನೆ ನಡೆಸಿ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಕಲಬುರಗಿ ರವರಿಗೆ ಆದೇಶಿಸಲಾಗಿತ್ತು.

ಅದರಂತೆ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ತಪಾಸಣೆ ನಡೆಸಿ ತನಿಖಾ ತಂಡವು ನೀಡಿರುವ ವರದಿಯನ್ವಯ ಪ್ರಾದೇಶಿಕ ಆಯುಕ್ತರು ತಮ್ಮ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

ಸದರಿ ವರದಿಯಲ್ಲಿ ತಮ್ಮ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ. ಅದರಂತೆ ಪ್ರಾದೇಶಿಕ ಆಯುಕ್ತರು ಸಲ್ಲಿಸಿರುವ ವರದಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ತನಿಖಾ ವರದಿಯಲ್ಲಿನ ಆರೋಪಗಳ ಕುರಿತು ತಮ್ಮ ಸಮಜಾಯಿಷಿಯನ್ನು 07 ದಿನದೊಳಗಾಗಿ ಸಲ್ಲಿಸಲು ಸೂಚಿಸಿದೆ.

ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನು ಇರುವುದಿಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ನಿರ್ಧರಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರನ್ವಯ ಮುಂದಿನ ಕ್ರಮ ಜರುಗಿಸಲಾಗುವುದೆಂದು ಸೂಚಿಸಿದೆ.

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ),
ನಗರಾಭಿವೃದ್ಧಿ ಇಲಾಖೆ.

**ಇವರಿಗೆ,**

ಶ್ರೀ ಅಭಯ ಕುಮಾರ್,
(ಹಿಂದಿನ ಆಯುಕ್ತರು, ಬೀದರ ನಗರಾಭಿವೃದ್ಧಿ ಪ್ರಾಧಿಕಾರ)
ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ),
ನಗರಸಭೆ, ಶಹಾಬಾದ್,
ಕಲಬುರಗಿ ಜಿಲ್ಲೆ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 147 ಗುಅಪ್ರಾ 2020 (ಭಾ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 27.11.2020.

## ಅಧಿಸೂಚನೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 3(3)(ಎ) ರನ್ವಯ ಹಾಗೂ ಕಲಂ 3(4) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಾಬುವಾಲಿ (ನಿಂಗಪ್ಪಾ), ತಂದೆ ಕಾಶಪ್ಪವಾಲಿ, "ರತ್ನದೀಪ ನಿವಾಸ" ಮನೆ ಸಂಖ್ಯೆ 9-4-11, ಸಾಯಿ ಕಾಲೋನಿ, ಗಾಂಧಿಗಂಜ್ ರಸ್ತೆ, ಬೀದರ್ ಇವರನ್ನು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಮೂರು ವರ್ಷದ ಅವಧಿವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ನೇಮಕ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ.ಎಸ್.ಶಿವಕುಮಾರಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 25 ಪ್ರತಿಗಳನ್ನು ಈ ಕಛೇರಿಗೆ ಒದಗಿಸುವಂತೆ ಕೋರಿದೆ.

ಇವರಿಗೆ,

1. ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ, ಬೀದರ್.
2. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.
3. ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ್.
4. ಸಂಬಂಧಪಟ್ಟವರಿಗೆ,- ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ, ಇವರ ಮುಖಾಂತರ.
5. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಗಳ ಯವರ ವಿಶೇಷ ಕರ್ತವ್ಯಾಧಿಕಾರಿ (ನಾಮ ನಿರ್ದೇಶನ), ವಿಧಾನಸೌಧ, ಬೆಂಗಳೂರು.
2. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 104 ಬೆಮಪ್ರಾ 2023(ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ, 4ನೇ ಮಹಡಿ
ಬೆಂಗಳೂರು, ದಿನಾಂಕ:23.05.2023

## ಅಧಿಸೂಚನೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 3(3)(ಎ) (ಎಲ್) ಮತ್ತು (ಎಂ) ರನ್ವಯ ಹಾಗೂ 3(4) ರಡಿಯಲ್ಲಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ4-ಸಿ(3)(i) ಮತ್ತು 4-ಸಿ(3)(iv) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕ್ರಮವಾಗಿ ಈ ಹಿಂದೆ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಹಾಗೂ ನಗರ ಯೋಜನಾ ಪ್ರಾಧಿಕಾರಗಳಿಗೆ ಮಾಡಿರುವ ಎಲ್ಲಾ ಅಧ್ಯಕ್ಷರು ಮತ್ತು ಸದಸ್ಯರುಗಳ ನಾಮ ನಿರ್ದೇಶನವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಸತೀಶ್ ಕಬಾಡಿ
(ಸತೀಶ್ ಕಬಾಡಿ) 23.05.2023
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

**ಇವರಿಗೆ:-**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು – ಸದರಿ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 25 ಪ್ರತಿಗಳನ್ನು ಈ ಸಚಿವಾಲಯಕ್ಕೆ ಒದಗಿಸುವುದು.

**ಪ್ರತಿ:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
4. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2....,

Scanned with OKEN Scann

5. ಸಂಬಂಧಪಟ್ಟ ಎಲ್ಲಾ ಉಪವಿಭಾಗಾಧಿಕಾರಿಗಳು - ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ ರವರ ಮುಖಾಂತರ.
6. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
7. ಸಧಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು - ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ ರವರ ಮುಖಾಂತರ
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
9. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ (ನಾಮ ನಿರ್ದೇಶನ), ವಿಧಾನಸೌಧ, ಬೆಂಗಳೂರು.

Scanned with OKEN Scanner

# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 49 ಸಮನ್ವಯ 2023

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:22-06-2023

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

ಇವರಿಗೆ:

ಶ್ರೀ ವಿವೇಕ್ ಕಾರೇಕರ್,
ಅಪರ ನಿರ್ದೇಶಕರು,
ವಲಯ ಕಚೇರಿ ಧಾರವಾಡ.

ಮಾನ್ಯರೇ,

**ವಿಷಯ:** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 673ಕ್ಕೆ ಉತ್ತರಿಸುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 673 ಕ್ಕೆ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಿವೇಶನಗಳ ಕುರಿತು, ಸದನದಲ್ಲಿ ಉತ್ತರ ನೀಡುವಂತೆ ಮಾನ್ಯ ನಗರಾಬಿವೃದ್ಧಿ ಸಚಿವರನ್ನು ಕೋರಿರುತ್ತಾರೆ. ಸದರಿ ವಿಷಯದ ಬಗ್ಗೆ ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾದಿಕಾರ, ಬೀದರ್ ರವರು ನೀಡಿರುವ ಉತ್ತರದನ್ವಯ ದಿನಾಂಕ:21.02.2023 ರಂದು ಸದನದಲ್ಲಿ ಉತ್ತರಿಸಲಾಗಿರುತ್ತದೆ.(ಪ್ರತಿ ಹಾಗೂ ಅಡಕಗಳನ್ನು ಇದರೊಂದಿಗೆ ಲಗತ್ತಿಸಿದೆ).

ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾದಿಕಾರ, ಬೀದರ್ ರವರು ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ, ಬೀದರ್ ನಗರದ ಚಿದ್ರಿ ಮತ್ತು ನೌಬಾದ ಸರ್ವೆ ನಂಬರ್ ಗಳಲ್ಲಿ ನಿವೇಶನ ಹಂಚಿಕೆ ಮಾಡುವಲ್ಲಿ ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಈ ಸಂಬಂಧ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿದೆಯೇ? ಎಂಬ ಬಗ್ಗೆ ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೂಲ ದಾಖಲಾತಿಗಳನ್ನು ಪಡೆದು ಪರಿವೀಕ್ಷಣೆ ಮಾಡಿ ಒಂದು ವಾರದೊಳಗಾಗಿ ವರದಿ ಸಲ್ಲಿಸುವಂತೆ ಉಲ್ಲೇಖ ಪತ್ರದಲ್ಲಿ ಶ್ರೀ ಟಿ.ವಿ.ಮುರಳಿ, ನ.ಗ್ರಾ.ಯೋ. ಹೆಚ್ಚುವರಿ ನಿರ್ದೇಶಕರು, ಶ್ರೀಮತಿ ಶಾಂತಲಾ, ನ.ಗ್ರಾ.ಯೋ. ಜಂಟಿ ನಿರ್ದೇಶಕರು, ನ.ಗ್ರಾ.ಯೋ. ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಕಲಬುರಗಿ. ಇವರನ್ನೊಳಗೊಂಡ ತಂಡ ವನ್ನು ರಚಿಸಿ ಆದೇಶಿಸಲಾಗಿತ್ತು ಸದರಿ

ತಂಡದಲ್ಲಿನ ಶ್ರೀ ಮುರಳಿ ಇವರ ಬದಲು ಶ್ರೀ ವಿವೇಕ್ ಕಾರೇಕರ್ ಅಪರ ನಿರ್ದೇಶಕರು ವಲಯ ಕಛೇರಿ ಧಾರವಾಡ ಇವರನ್ನು ನೇಮಿಸಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ

ತಮ್ಮ ವಿಶ್ವಾಸಿ

(ಹೆಚ್.ಎಸ್.ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಬಿ.ಬಿ.ಎಂ.ಪಿ-2 ಮತ್ತು ಸಮನ್ವಯ)
ನಗರಾಭಿವೃದ್ಧಿ ಇಲಾಖೆ

22/6/23

ಅನುಬಂಧ -3

(2)

# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 49 ಸಮನ್ವಯ 2023

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:11-08-2023

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

ಇವರಿಗೆ:

1. ಶ್ರೀಮತಿ ಶಾಂತಲಾ, ನ.ಗ್ರಾ.ಯೋ, ಜಂಟಿ ನಿರ್ದೇಶಕರು,
2. ನ.ಗ್ರಾ.ಯೋ, ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಕಲಬುರಗಿ.
3. ಶ್ರೀ ವಿವೇಕ್ ಕಾರೇಕರ್, ಅಪರ ನಿರ್ದೇಶಕರು, ವಲಯ ಕಛೇರಿ ಧಾರವಾಡ

16/8/23

ಮಾನ್ಯರೇ,

**ವಿಷಯ:-** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 673ಕ್ಕೆ ಉತ್ತರಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಸಮಸಂಖ್ಯೆಯ ದಿನಾಂಕ:04-03-2023.ರ ಪತ್ರ
2. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾನಯೋಮಂ: ಬೀ:ನ.ಪ್ರಾ/1169, ದಿನಾಂಕ:23-03-2023.
3. ಸರ್ಕಾರದ ಸಮಸಂಖ್ಯೆಯ ದಿನಾಂಕ:22-06-2023.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ದಿನಾಂಕ:04-03-2023ರ ಪತ್ರದಲ್ಲಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ಇವರು ಮಂಡಿಸಿದ್ದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 673 ಕ್ಕೆ, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಲಾದ ನಿವೇಶನಗಳ ಕುರಿತು, ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ ಇವರು ನೀಡಿರುವ ಉತ್ತರದನ್ವಯ ದಿನಾಂಕ:21-02-2023 ರಂದು ಸದನದಲ್ಲಿ ಉತ್ತರಿಸಲಾಗಿರುತ್ತದೆ.

ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರ ಇವರು ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ, ಬೀದರ್ ನಗರದ ಚಿದ್ರಿ ಮತ್ತು ನೌಬಾದ ಸರ್ವೆ ನಂಬರ್ ಗಳಲ್ಲಿ ನಿವೇಶನವನ್ನು ಹಂಚಿಕೆ ಮಾಡುವಲ್ಲಿ ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯ ವಿದಾನವನ್ನು ಅನುಸರಿಸಲಾಗಿದೆಯೇ ಹಾಗೂ ಈ ಸಂಬಂಧ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿದೆಯೇ? ಎಂಬ ಬಗ್ಗೆ, ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೂಲ ದಾಖಲಾತಿಗಳನ್ನು ಪಡೆದು ಪರಿವೀಕ್ಷಣೆ ಮಾಡಿ ಒಂದು ವಾರದೊಳಗಾಗಿ ವರದಿ ಸಲ್ಲಿಸುವಂತೆ

...2..

ಶ್ರೀ ಟಿ.ವಿ.ಮುರಳಿ, ನ.ಗ್ರಾ.ಯೋ. ಹೆಚ್ಚುವರಿ ನಿರ್ದೇಶಕರು, ಶ್ರೀಮತಿ ಶಾಂತಲಾ, ನ.ಗ್ರಾ.ಯೋ. ಜಂಟಿ ನಿರ್ದೇಶಕರು, ನ.ಗ್ರಾ.ಯೋ. ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಕಲಬುರಗಿ. ಇವರನ್ನೊಳಗೊಂಡ ತಂಡವನ್ನು ರಚಿಸಿ ಮೂಲ ದಾಖಲಾತಿಗಳನ್ನು ಪಡೆದು ಪರಿವೀಕ್ಷಣೆಮಾಡಿ ಒಂದು ವಾರದೊಳಗೆ ವರದಿಯನ್ನು ನೀಡುವಂತೆ ಕೋರಲಾಗಿತ್ತು ( ಪತ್ರದ ಪ್ರತಿಯನ್ನು ಲಗತ್ತಿಸಿದೆ).

ಮುಂದುವರೆದು, ಉಲ್ಲೇಖ (2) ದಿನಾಂಕ:23-03-2023ರ ಪತ್ರದಲ್ಲಿ ಕೋರಿರುವಂತೆ, ಉಲ್ಲೇಖ (3) ದಿನಾಂಕ:22-06-2023 ರ ಪತ್ರದಲ್ಲಿ, ಶ್ರೀ ಟಿ.ವಿ. ಮುರಳಿ, ನ.ಗ್ರಾ.ಯೋ. ಹೆಚ್ಚುವರಿ ನಿರ್ದೇಶಕರು ಇವರ ಬದಲು, ಶ್ರೀ ವಿವೇಕ್ ಕಾರೇಕರ್, ಅಪರ ನಿರ್ದೇಶಕರು, ವಲಯ ಕಛೇರಿ, ಧಾರವಾಡ ರವರನ್ನು ನೇಮಿಸಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಬೀದರ್ ನಗರದ ಚಿದ್ರಿ ಮತ್ತು ನೌಬಾದ ಸರ್ವೆ ನಂಬರ್ ಗಳಲ್ಲಿ ನಿವೇಶನ ಹಂಚಿಕೆ ಮಾಡುವಲ್ಲಿ ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸಲಾಗಿದೆಯೇ? ಹಾಗೂ ಈ ಸಂಬಂಧ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿದೆಯೇ? ಎಂಬ ಬಗ್ಗೆ, ಆಯುಕ್ತರು, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೂಲ ದಾಖಲಾತಿಗಳನ್ನು ಪಡೆದು ಪರಿವೀಕ್ಷಣೆ ಮಾಡಿ ಒಂದು ವಾರದೊಳಗಾಗಿ ವರದಿ ಸಲ್ಲಿಸುವಂತೆ ಕೋರಿದ್ದು. ಆದರೆ, ಇದುವರೆಗೂ ಯಾವುದೇ ವರದಿಯು ತಮ್ಮಿಂದ ಸ್ವೀಕೃತವಾಗಿರುವುದಿಲ್ಲ.

ಆದುದರಿಂದ, ಸದರಿ ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು ಕೋರಲಾಗಿರುವ ವರದಿಯನ್ನು **ತುರ್ತಾಗಿ** ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮತ್ತೊಮ್ಮೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

11/8/23

**(ಹೆಚ್. ಎಸ್. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
(ಬಿ.ಬಿ.ಎಂ.ಪಿ-2 ಮತ್ತು ಸಮನ್ವಯ)
ನಗರಾಭಿವೃದ್ಧಿ ಇಲಾಖೆ.

11/8/23

## ಜಂಟಿ ಪರಿವೀಕ್ಷಣಾ ವರದಿ

ಸರ್ಕಾರದ ಪತ್ರ ಸಂಖ್ಯೆ: ನಅಇ 49 ಸಮನ್ವಯ 2023 ಸಮನ್ವಯ ಬೆಂಗಳೂರು., ದಿ:04-03-2023, 22-06-2023, ಹಾಗೂ 11-08-2023 ರಂತೆ ರಚಿಸಲಾದ ತನಿಖಾ ತಂಡದಿಂದ ರಚಿಸಲಾದ ದಿ:13-09-2023 ರಿಂದ 15-09-2023 ರವರೆಗೆ ಬೀದರ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ ಕಚೇರಿಗೆ ಹಾಜರಾಗಿ, ಬೀದರ ನಗರದ ಚಿದ್ರಿ ಗ್ರಾಮದ ರಿ.ಸ.ನಂ.125 (ಸಿದ್ರಾಮಯ್ಯ ಬಡಾವಣೆ) ಹಾಗು ನೌಬಾದ ಸರ್ವೇ ನಂ.8 (ವ್ಯಾಲಿವ್ಯೂವ್) ಬಡಾವಣೆಯಲ್ಲಿನ ಸುಮಾರು 13 ನಿವೇಶನಗಳನ್ನು ನಿಯಮಬಾಹಿರವಾಗಿ ಪ್ರಾಧಿಕಾರವು ಹಂಚಿಕೆ ಮಾಡಿದ್ದು, ಇದರಿಂದ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿರುವ ಪರಿಶೀಲಿಸುವ ಕುರಿತು ಪ್ರಾಧಿಕಾರವು ಹಾಜರಪಡಿಸಿರುವ ಕಡತ / ದಾಖಲೆಗಳಂತೆ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

### ಚಿದ್ರಿ ಗ್ರಾಮದ ರಿ.ಸ.ನಂ.125 (ಸಿದ್ರಾಮಯ್ಯ ಬಡಾವಣೆ)

<table>
<tr><th>ಕ್ರ.ಸಂ</th><th>ಪರಿವೀಕ್ಷಣಾ ಅಂಶಗಳು</th><th>ಲಗತ್ತುಗಳು</th></tr>
<tr><td>1.</td><td>ಸರ್ಕಾರದ ಆದೇಶ ಸಂಖ್ಯೆ:-ವನಇ 952 ಎಂಐಬಿ 93, ಬೆಂಗಳೂರು., ದಿ:28/29-12-2003 (1993) ಪ್ರಕಾರ ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ ರ ಕಲಂ 18 (3) ರನ್ವಯ ಚಿದ್ರಿ ಗ್ರಾಮದ ರಿ.ಸ.ನಂ.125ಎ, 125:ಎ1 ಮತ್ತು 125:ಇ ರಲ್ಲಿ 33ಎಕರೆ-12ಗುಂಟೆ ಜಮೀನಿಗೆ 397 ನಿವೇಶನಗಳನ್ನು ಮಾಡಲು ಮಂಜೂರಾತಿಯನ್ನು ನೀಡಲಾಗಿರುತ್ತದೆ.</td><td>Annexure-1<br>ಎ-4 2 ಪ್ರತಿಗಳು<br>ವಿನ್ಯಾಸ ನಕ್ಷೆ-1 ಪ್ರತಿ</td></tr>
<tr><td>2.</td><td>ಸರ್ಕಾರದ ಆದೇಶ ಸಂಖ್ಯೆ:ವನಇ 952 ಎಂಐಬಿ 93, ಬೆಂಗಳೂರು ದಿ:05-02-1998 ರನ್ವಯ ಚಿದ್ರಿ ಗ್ರಾಮದ ಸರ್ವೇ ನಂ.125 ರಲ್ಲಿ 33ಎಕರೆ-12ಗುಂಟೆ ಜಮೀನಿನಲ್ಲಿ ವಿವಿಧ ಅಳತೆಯ ಒಟ್ಟು 475 ನಿವೇಶನಗಳನ್ನು ಮಾಡಲು ಪರಿಷ್ಕೃತ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ಪರಿಷ್ಕೃತದಲ್ಲಿನ ವಿನ್ಯಾಸದ ಭೂ ಬಳಕೆ<br><br>ವಸತಿಗಾಗಿ — 6381.00 ಚ.ಮೀ — ಶೇ.47.36%<br>ನಾಗರೀಕ ಸೌಲಭ್ಯಕ್ಕಾಗಿ — 13470.00 ಚ.ಮೀ — ಶೇ.10.00%<br>ಉದ್ಯಾನವನಕ್ಕಾಗಿ — 20210.00 ಚ.ಮೀ — ಶೇ.15.00%<br>ರಸ್ತೆಗಾಗಿ — 37241.00 ಚ.ಮೀ — ಶೇ.27.64%<br>ಒಟ್ಟು — 134731.00 ಚ.ಮೀ — ಶೇ.100.00%<br><br>ಸರ್ಕಾರದ ದಿ:05-02-1998 ಆದೇಶದನ್ವಯ ಅನುಮೋದಿಸಲಾಗಿರುವ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಪ್ರಾಧಿಕಾರದಲ್ಲಿ ಯಾವುದೇ ದಾಖಲೆಗಳಿರುವುದು ಕಂಡುಬಂದಿರುವುದಿಲ್ಲ.</td><td>Annexure-2<br>ಎ-4 2 ಪ್ರತಿಗಳು<br>ವಿನ್ಯಾಸ ನಕ್ಷೆ-1 ಪ್ರತಿ</td></tr>
<tr><td>3.</td><td>ಸದರಿ ವಿನ್ಯಾಸ ಪ್ರಾಧಿಕಾರ ಸಭೆಯ ನಡಾವಳಿ ದಿ:17-10-2015ರ ವಿಷಯ ಸಂಖ್ಯೆ: 4 ರ ನಿರ್ಣಯದಂತೆ "ಪ್ರಾಧಿಕಾರದ ಅಭಿವೃದ್ಧಿ ಯೋಜನೆಯಾದ ಸಿದ್ರಾಮಯ್ಯ ಬಡಾವಣೆಯನ್ನು Electronic Total Station (ETS) ಮಷೀನನಿಂದ ಸಮಗ್ರ ಅಳತೆಗಳನ್ನು ಒಳಗೊಂಡು ಬಡಾವಣೆಯ ರಿ-ಸರ್ವೆ ಮಾಡಿಸಿರುವ ಮಾರ್ಪಾಡಿತ ನಕ್ಷೆ ತಯಾರಿಸಿದ್ದನ್ನು ಹಾಗೂ ಸರ್ವೇ ಮಾಡಿ ಗುರುತಿಸಿರುವುದನ್ನು ಈ ಕೆಳಕಂಡ ಅಂಶ ಹಾಗೂ ಕ್ರಮಗಳಿಗೆ ಒಳಪಟ್ಟು ಸರ್ವಾನುಮತದಿಂದ ಅನುಮೋದಿಸಲಾಯಿತು." ಎಂಬ ಬಗ್ಗೆ ತೀರ್ಮಾನಿಸಲಾಗಿದೆ.</td><td></td></tr>
</table>

<table>
<tr>
<td>4.</td>
<td>
(ETS) ಸರ್ವೆ ಮುಖಾಂತರ ಸಿದ್ಧಪಡಿಸಿದ್ದ ವಿನ್ಯಾಸ ನಕ್ಷೆಯಲ್ಲಿ ವಿವಿಧ ಅಳತೆಯ ಒಟ್ಟು 450 ನಿವೇಶನಗಳನ್ನು ಅಳವಡಿಸಿ
<table>
<tr><td>ವಸತಿಗಾಗಿ</td><td>66287.00 ಚ.ಮೀ</td><td>ಶೇ.49.18%</td></tr>
<tr><td>ನಾಗರೀಕ ಸೌಲಭ್ಯಕ್ಕಾಗಿ</td><td>1101.00 ಚ.ಮೀ</td><td>ಶೇ.08.16%</td></tr>
<tr><td>ಉದ್ಯಾನವನಕ್ಕಾಗಿ</td><td>16132.00 ಚ.ಮೀ</td><td>ಶೇ.11.97%</td></tr>
<tr><td>ರಸ್ತೆಗಾಗಿ</td><td>41165.00 ಚ.ಮೀ</td><td>ಶೇ.30.69%</td></tr>
</table>
ಭೂ ಬಳಕೆ ನಿಗಧಿಪಡಿಸಿ, ಅಧ್ಯಕ್ಷರು, ಆಯುಕ್ತರು ಹಾಗೂ ನಗರ ಯೋಜಕ ಸದಸ್ಯರು ಸಹಿ ಮಾಡಿರುವ ನಕ್ಷೆ ಲಭ್ಯವಿರುತ್ತದೆ. ಹೆಚ್ಚುವರಿ ನಿವೇಶನ ಸಂಖ್ಯೆಗಳಾದ 16ಎ, 20ಎ, 1ಎ, 26ಎ, 49ಎ, 118ಎ, 137ಎ ಗಳನ್ನು ಮೂಲೆ ನಿವೇಶನಗಳೆಂದು ಗುರುತಿಸಿದ್ದು ಇರುತ್ತದೆ. Annexure-2 ರ ಮೂಲಕ ನಕ್ಷೆಯೊಂದಿಗೆ ತಾಳೆ ಮಾಡಲಾಗಿ ಉದ್ಯಾನವನದಲ್ಲಿ 4078.00 ಚ,ಮೀ ನಾಗರೀಕ ಸೌಲಭ್ಯದಲ್ಲಿ2469.00 ಚ.ಮೀ ಕ್ಷೇತ್ರ., ಕಡಿತ ಮಾಡಿ ವಸತಿಯಲ್ಲಿ 2477.00 ಚ.ಮೀ. ರಸ್ತೆಯಲ್ಲಿ 3924.00 ಚ.ಮೀ. ಹೆಚ್ಚಿಗೆ ಕ್ಷೇತ್ರ ಅಳವಡಿಸಿರುವುದು ಗಮನಿಸಲಾಗಿದೆ.
</td>
<td>Annexure-3<br>ಎ-4 4 ಪ್ರತಿಗಳು<br>ವಿನ್ಯಾಸ ನಕ್ಷೆ-1 ಪ್ರತಿ</td>
</tr>
<tr>
<td>5.</td>
<td>
(ETS) ಸರ್ವೆ ಮುಖಾಂತರ ಸಿದ್ಧಪಡಿಸಿದ್ದ ವಿನ್ಯಾಸ ನಕ್ಷೆಯನ್ನು Annexure-3 ಪುನ: ಪರಿಷ್ಕರಿಸಿ ವಿವಿಧ ಅಳತೆಯ 455 ನಿವೇಶನಗಳನ್ನು ರಚಿಸಿ ಹೆಚ್ಚುವರಿ ನಿವೇಶನಗಳ ಸಂಖ್ಯೆ:14ಎ, 2ಎ, 10ಎ, 25ಎ, 50ಎ, 118ಎ, ಮತ್ತು 136ಎ ನಿವೇಶನಗಳನ್ನು ಬ್ಲಾಕ್ ಮಧ್ಯದಲ್ಲಿ ಹೆಚ್ಚುವರಿ ನಿವೇಶನಗಳನ್ನಾಗಿ ಅಳವಡಿಸಿ
<table>
<tr><td>ವಸತಿಗಾಗಿ</td><td>6381.00 ಚ. ಮೀ</td><td>ಶೇ.47.36%</td></tr>
<tr><td>ನಾಗರೀಕ ಸೌಲಭ್ಯಕ್ಕಾಗಿ</td><td>13470.00 ಚ. ಮೀ</td><td>ಶೇ.10.00%</td></tr>
<tr><td>ಉದ್ಯಾನವನಕ್ಕಾಗಿ</td><td>20210.00 ಚ. ಮೀ</td><td>ಶೇ.15.00%</td></tr>
<tr><td>ರಸ್ತೆಗಾಗಿ</td><td>37241.00 ಚ. ಮೀ</td><td>ಶೇ.27.64%</td></tr>
<tr><td>ಒಟ್ಟು</td><td>134731.00 ಚ. ಮೀ</td><td>ಶೇ.100.00%</td></tr>
</table>
ಭೂ ಬಳಕೆ ನಿಗಧಿಪಡಿಸಿ, ಅಧ್ಯಕ್ಷರು, ಆಯುಕ್ತರು ಹಾಗೂ ನಗರ ಯೋಜಕ ಸದಸ್ಯರು ಸಹಿ ಮಾಡಿರುವ ನಕ್ಷೆ ಲಭ್ಯವಿರುತ್ತದೆ. ಸದರಿ ನಕ್ಷೆಗೆ ಪ್ರಾಧಿಕಾರದಿಂದಾಗಲಿ ಹಾಗೂ ಸರ್ಕಾರದಿಂದ ಯಾವುದೇ ಅನುಮೋದನೆ ಪಡೆದಿರುವುದು ಕಂಡುಬಂದಿರುವುದಿಲ್ಲ. ಸದರಿ ನಕ್ಷೆಯನ್ನು ಸ್ಥಳದಲ್ಲಿ ಅಭಿವೃದ್ಧಿಗೊಂಡಂತೆ ತಯರಿಸಲಾಗಿರುವ ಬಗ್ಗೆ ನಮೂದಿಸಿದ್ದು, Annexure-3 ರ ನಕ್ಷೆಯೊಂದಿಗೆ ತಾಳೆ ಹೊಂದಿಸಲಾಗಿ ವ್ಯತ್ಯಾಸ ಕಂಡುಬಂದಿರುತ್ತದೆ. Annexure-4 ನಕ್ಷೆಯಲ್ಲಿ ಭೂ ಬಳಕೆಯನ್ನು ಲೆಕ್ಕಹಾಕದೆ ಮೂಲತ: ಪರಿಷ್ಕರಿಸುವ Annexure-2 ರ ನಕ್ಷೆಯ ಭೂ ಬಳಕೆಯನ್ನು ಯಥಾವತ್ತಾಗಿ ಅಳವಡಿಸಿರುವುದು ಕಂಡು ಬಂದಿರುತ್ತದೆ.
</td>
<td>Annexure-4<br>ವಿನ್ಯಾಸ ನಕ್ಷೆ-1 ಪ್ರತಿ</td>
</tr>
</table>

| | | |
|---|---|---|
| 6. | ದಿ:04-10-2021 ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:5 ರನ್ವಯ ಪ್ರಾಧಿಕಾರದಿಂದ ವಸತಿ ಅಭಿವೃದ್ಧಿ ಯೋಜನೆಯಡಿ ಚಿದ್ರಿ ಗ್ರಾಮದ ಸರ್ವೆ ನಂ.125 ಪರಿಷ್ಕೃತ ವಿನ್ಯಾಸದ ನಕಾಶೆಯಲ್ಲಿ ಅಳವಡಿಸಿರುವ ಹೆಚ್ಚುವರಿ ನಿವೇಶನಗಳು (Annexure-4 ರ ನಕ್ಷೆಯ) ಮತ್ತು ನೌಬಾದ್ ಗ್ರಾಮದ ಸರ್ವೆ ನಂ.8 ರಲ್ಲಿ ಖಾಲಿ ನಿವೇಶನಗಳನ್ನು ಇ-ಹರಾಜು (Eproc.Karnataka.gov.in) ಮುಖಾಂತರ ಹರಾಜು ಮಾಡಲು ನಿರ್ಣಯಿಸಲಾಗಿರುತ್ತದೆ. | Annexure-5<br>ಎ-4 4 ಪ್ರತಿಗಳು |
| 7. | ಪ್ರಾಧಿಕಾರದಿಂದ ಸಭೆಯ ದಿ:04-10-2021 ರ ವಿಷಯ ಸಂಖ್ಯೆ:5 ರಂತೆ 9 ನಿವೇಶನಗಳನ್ನು E-procurement ರ ಮೂಲಕ ಹರಾಜು ಮಾಡಲು ಬೀದರ ನಗರದ ಬೀದರ ಕ್ರಾಂತಿಯಲ್ಲಿ ದಿ:30-10-2021 ರಂದು ಹಾಗೂ ಬೀದರ ಸಂದೇಶ ಹಿಂದಿ ದಿನಪತ್ರಿಕೆಯಲ್ಲೂ ದಿ:31-10-2021 ರಂದು ಪತ್ರಿಕಾ ಪ್ರಕಟಣೆ ನೀಡಿರುತ್ತಾರೆ. ಸದರಿ ಪ್ರಕಟಣೆಗಳು ವಾರ್ತಾ ಇಲಾಖೆ ಮುಖಾಂತರ ಪ್ರಕಟಣೆ ಹೊರಡಿಸಿರುವ ಬಗ್ಗೆ ಕಂಡು ಬಂದಿರುವುದಿಲ್ಲ. | Annexure-6<br>ಎ-4 2ಪ್ರತಿಗಳು |
| 8. | Annexure-4 ರ ನಕ್ಷೆಯಲ್ಲಿ ಹೆಚ್ಚುವರಿಯಾಗಿ ಅಳವಡಿಸಿರುವ 9 ನಿವೇಶನಗಳ ನಿವೇಶನ ಸಂಖ್ಯೆ: 118ಎ ಮೂಲೆ ನಿವೇಶನ ಇದ್ದು, ಇದನ್ನು ಹೊರತುಪಡಿಸಿ ಉಳಿದ 8 ನಿವೇಶನಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/291/ಅಪ್ರಾವಿ/98, ಬೆಂಗಳೂರು., ದಿ:24-11-2000 ರಂತೆ ಬಿಡಿ ನಿವೇಶನ ಎಂದು ಪರಿಗಣಿಸಿ ಶೇ. 75% ರಷ್ಟು ಹರಾಜು ಮುಖಾಂತರ ಶೇ.25% ರಷ್ಟು ಹಂಚಿಕೆ ಮುಖಾಂತರ ಫಲಾನುಭವಿಗಳಿಗೆ ನೀಡಬೇಕಾಗಿರುತ್ತದೆ. ಶೇ 25% ರಷ್ಟು ಕಾಯ್ದಿರಿಸಿದ ನಿವೇಶನಗಳಿಗೆ ವರ್ಗಾವಾರು ವಿಂಗಡಣೆ ಮಾಡಿ ಹಂಚಿಕೆ ಮಾಡಬೇಕಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ಇಂತಹ ಹಲವಾರು ಅಂಶಗಳು ಪಾಲನೆ ಆಗದಿರುವುದು ಕಂಡುಬಂದಿರುತ್ತದೆ. | Annexure-7<br>ಎ-4 3 ಪ್ರತಿಗಳು |
| 9. | 9 ನಿವೇಶನಗಳ ನೋಂದಣಿ ಶುಲ್ಕ ಪಾವತಿಸಿರುವ ಬ್ಯಾಂಕ್ ಚಲನಗಳನ್ನು ಪರಿಶೀಲನೆ ಮಾಡಲಾಗಿ, ಚಲನ್‌ಗಳ ಮೇಲೆ ಬೇರೆ ಬೇರೆ ಹೆಸರಿದ್ದು, ಸಹಿ ಒಂದೆ ತರಹದ ಇರುತ್ತದೆ. ಹಾಗೂ, ಅದೇ ದಿನ ಎಲ್ಲಾ ಚಲನ್‌ಗಳನ್ನು ಬ್ಯಾಂಕಿಗೆ ಮೊತ್ತ ಪಾವತಿಸಿರುವುದು ಕಂಡು ಬರುತ್ತದೆ. ಎರಡು ಚಲನ್ ಪ್ರತಿಗಳಲ್ಲಿ ಹೆಸರು ತಿದ್ದುಪಡಿ ಮಾಡಿದ್ದು, ಬ್ಯಾಂಕಿನಿಂದ ಪ್ರತಿ ಪಡೆದು ಹೆಸರು ಬದಲಾವಣೆ ಇರುವುದು ಗಮನಿಸಲಾಗಿದೆ. | Annexure-8<br>ಎ-4 11 ಪ್ರತಿಗಳು |
| 10 | ಸದರಿ ಒಟ್ಟು 9 ನಿವೇಶನಗಳಿಗೆ Single Bid ಆಗಿರುವುದು ಗಮನಿಸಲಾಗಿದೆ. ಇದರ ಬಗ್ಗೆ ಆಯುಕ್ತರು ಪ್ರಾಧಿಕಾರದಿಂದ ದಿ:15-12-2021 ರಂದು ಪತ್ರದ ಮುಖಾಂತರ ಅಧ್ಯಕ್ಷರ ಗಮನಕ್ಕೆ ತಂದಿದ್ದು, ಸದರಿ ಪತ್ರದಲ್ಲಿ ಅಧ್ಯಕ್ಷರು ಈ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸುವುದು ಎಂದು ಸೂಚಿಸಿರುತ್ತಾರೆ. ಆದರೆ ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಇ-ಹರಾಜಿನಲ್ಲಿ Single Bid ಆದ ಬಗ್ಗೆ ಚರ್ಚಿಸದೇ ನಿವೇಶನಗಳಿಗೆ ಅನುಮೋದನೆ ನೀಡಿರುವುದು ಕಂಡುಬರುತ್ತದೆ. | Annexure-9<br>ಎ-4 1 ಪ್ರತಿಗಳು |

## ನೌಬಾದ ಸರ್ವೆ ನಂ.8 (ವ್ಯಾಲಿವ್ಯೂವ್)

| | | |
|---|---|---|
| 11. | ಜಿಲ್ಲಾಧಿಕಾರಿಗಳು, ಬೀದರ ರವರ ಕಚೇರಿ ಆದೇಶ ಪತ್ರ ಸಂಖ್ಯೆ: ಕಂ:ಎಲ್ ಎನ್ ಡಿ.ಸಿಆರ್:287: 2005-06/169, ದಿ:09-08-2006 ರಂತೆ ನೌಬಾದ ಗ್ರಾಮದ ಸ.ನಂ. 8 ರಲ್ಲಿ 3 ಎಕರೆ ಸರ್ಕಾರಿ ಜಮೀನು ಪ್ರಾಧಿಕಾರಕ್ಕೆ ಮಂಜೂರಿ ನೀಡಿ ಆದೇಶಿಸಿರುತ್ತಾರೆ. | Annexure-10<br>ಎ-4 2- ಪ್ರತಿಗಳು |
| 12. | ಸದರಿ ಜಮೀನಿಗೆ ಸರ್ಕಾರದ ಆದೇಶ ಸಂಖ್ಯೆ: ನಇ 397 ಬೆಮಪ್ರಾ 06, ಬೆಂಗಳೂರು ದಿ:27-12-2006 ರನ್ವಯ 3ಎಕರೆ ಪ್ರದೇಶದಲ್ಲಿ ವಸತಿ ಯೋಜನೆ ರೂಪಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. | Annexure-11<br>ಎ-4 2 ಪ್ರತಿಗಳು |
| 13. | ಈ ವಸತಿ ಬಡಾವಣೆಗೆ ಸರ್ಕಾರದಿಂದಾಗಲಿ ಅಥವಾ ಪ್ರಾಧಿಕಾರದಿಂದಾಗಲಿ ಅನುಮೋದನೆ ಆಗಿರುವ ವಿನ್ಯಾಸ ನಕ್ಷೆ ಇರುವುದಿಲ್ಲ. ಆದರೆ ಜಾಹೀರಾತು ನಕ್ಷೆ ಮಾತ್ರ ಕಡತದಲ್ಲಿ ಲಭ್ಯವಿರುತ್ತದೆ. | Annexure-12<br>ಎ-4 11 ಪ್ರತಿಗಳು |
| 14. | ಸದರಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಪ್ರಾಧಿಕಾರದಿಂದ ದಿ:26-07-2007 ರಂದು ಹರಾಜು / ಹಂಚಿಕೆ ಮಾಡಿರುತ್ತಾರೆ. ಆದರೆ ಇದರಲ್ಲಿ ನಿವೇಶನ ಸಂಖ್ಯೆ:25 ಸತ್ವಾಲ ಸಿಂಗ್ ತಂದೆ : ಹರಬನ್ ಸಿಂಗ್ , ನಿವೇಶನ ಸಂಖ್ಯೆ: 20 ಡಾ॥ ದೀಪಾ ಗಂಡ ವಿಜಯಕೊಂಡ, ನಿವೇಶನ ಸಂಖ್ಯೆ: 40 ಶ್ರೀ ಅರವಿಂದ ಕಾಜಿ ಹಾಗೂ ನಿವೇಶನ ಸಂಖ್ಯೆ: 44 ಶ್ರೀಮತಿ ಭಾಗಿರತಿ ಇವರಿಗೆ ಮಂಜೂರಾಗಿದ್ದು, ಇದನ್ನು ರದ್ದುಪಡಿಸದೇ ಪುನ: ಹರಾಜಿಗೆ ಪರಿಗಣಿಸಿರುತ್ತಾರೆ. | |
| 15. | ನಿವೇಶನ ಸಂಖ್ಯೆ:40 ಮತ್ತು 44 ಕ್ಕೆ ಪ್ರಾಧಿಕಾರದ ಸಭೆಯ ದಿ:04-10-2021 ರ ವಿಷಯ ಸಂಖ್ಯೆ: 5 ರಂತೆ ನಿವೇಶನಗಳನ್ನು E-procurement ರ ಮೂಲಕ ಹರಾಜು ಮಾಡಲು ಬೀದರ ನಗರದ ಬೀದರ ಕ್ರಾಂತಿ ಕನ್ನಡ ದಿನ ಪತ್ರಿಕೆಯಲ್ಲಿ ದಿ.30-10-2021 ಹಾಗೂ ಬೀದರ ಸಂದೇಶ ಹಿಂದಿ ದಿನ ಪತ್ರಿಕೆಯಲ್ಲಿ ದಿ:31-10-2021 ರಂದು ಪತ್ರಿಕಾ ಪ್ರಕಟಣೆ ನೀಡಿರುತ್ತಾರೆ. ಸದರಿ ಪ್ರಕಟಣೆಗಳು ವಾರ್ತಾ ಇಲಾಖೆ ಮುಖಾಂತರ ಪ್ರಕಟಣೆ ಹೊರಡಿಸಿರುವ ಬಗ್ಗೆ ಕಂಡು ಬಂದಿರುವುದಿಲ್ಲ. | Annexure-6<br>ಎ-4 2 ಪ್ರತಿಗಳು |
| 16. | ನಿವೇಶನ ಸಂಖ್ಯೆ:20 ಮತ್ತು 25ಕ್ಕೆ ಹಂಚಿಕೆಗೊಳಿಸಲು ಪ್ರಾಧಿಕಾರದ ಸಭೆಯ ದಿ:27-12-2022 ರ ವಿಷಯ ಸಂಖ್ಯೆ: 20(7) ರಂತೆ ನಿವೇಶನಗಳನ್ನು E- procurement ಮೂಲಕ ಹರಾಜು ಮಾಡಲು ಬೀದರ ನಗರದ ಬೀದರ ಕ್ರಾಂತಿ ಹಾಗೂ ಬೀದರ ಸಂದೇಶ ಹಿಂದಿ ದಿನಪತ್ರಿಕೆಯಲ್ಲಿ ದಿ:26-03-2022 ಹಾಗೂ ದಿ.27-03-2022ರಂದು ಪತ್ರಿಕಾ ಪ್ರಕಟಣೆ ನೀಡಿರುತ್ತಾರೆ. ಸದರಿ ಪ್ರಕಟಣೆಗಳು ವಾರ್ತಾ ಇಲಾಖೆ ಮುಖಾಂತರ ಪ್ರಕಟಣೆ ಹೊಂದಿಸಿರುವ ಬಗ್ಗೆ ಕಂಡು ಬಂದಿರುವುದಿಲ್ಲ. ಹಾಗೂ ಕ್ರಮ ಸಂಖ್ಯೆ(3) ಮತ್ತು (4) ರಲ್ಲಿ ಹಿಂದಿನ ದಿನಾಂಕಗಳನ್ನು ನಮೂದಿಸಿರುವುದು ಗಮನಿಸಲಾಗಿದೆ. | Annexure-14<br>ಎ-4 5- ಪ್ರತಿಗಳು |

# ತಂಡದ ಅಭಿಪ್ರಾಯ ವರದಿ

| | |
|---|---|
| ಬೀದರ ನಗರದ ಚಿದ್ರಿ ಗ್ರಾಮದ ಸ.ನಂ.125 (ಸಿದ್ರಾಮಯ್ಯ ಬಡಾವಣೆ) ಹಾಗೂ ನೌಬಾದ ಸರ್ವೆನಂ.8(ವಾಲಿವ್ಯೂವ್) ರಲ್ಲಿ ಪ್ರತ್ಯೇಕವಾಗಿ 9 ಹಾಗೂ 4 ಇರುವ ಬಿಡಿ ನಿವೇಶನಗಳನ್ನು E- proc.karnataka.gov.in ರ ಮುಖಾಂತರ ಇ-ಹರಾಜು ಮಾಡಿರುತ್ತಾರೆ. ಸದರಿ ಹರಾಜಿನ ಪ್ರಕ್ರಿಯೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ. | |
| 1. | ಮೇಲೆ ವಿವರಿಸಿದ ಅಂಶಗಳನ್ನು ಗಮನಿಸಲಾಗಿ, ಸಿದ್ರಾಮಯ್ಯ ಬಡಾವಣೆಯಲ್ಲಿನ ಒಟ್ಟು 33ಎ-12ಗುಂಟೆ ವಿಸ್ತೀರ್ಣದ ಜಮೀನಿಗೆ ದಿ:20-08-1993 ರಂದು ಒಟ್ಟು 397 ನಿವೇಶನಗಳನ್ನು ನಂತರ ದಿ:31-03-1997 ರ ಸಭೆಯ ನಿರ್ಣಯದಂತೆ ಒಟ್ಟು 475 ನಿವೇಶನಗಳನ್ನು, ಇಟಿಎಸ್ ಮುಖಾಂತರ ತಯಾರಿಸಲಾಗಿರುವ ನಕ್ಷೆಯಂತೆ 450 ನಿವೇಶನಗಳನ್ನು ಹಾಗೂ ಹರಾಜು ಮಾಡುವ ಪೂರ್ವದಲ್ಲಿ ಪುನಃ ಮಾರ್ಪಾಡಿಸಿದ ನಕ್ಷೆಯಂತೆ 455 ನಿವೇಶನಗಳನ್ನು ಅಳವಡಿಸಿ ಪರಿಷ್ಕರಿಸಲಾಗಿರುವ ವಿನ್ಯಾಸ ನಕ್ಷೆಗಳಿಗೆ ಸರ್ಕಾರದಿಂದ ಅನುಮೋದನೆ ಪಡೆದಿರುವುದಿಲ್ಲ. ಹಾಗೂ ನೌಬಾದ ಸ.ನಂ.8 ರ ಅನುಮೋದಿತ ವಿನ್ಯಾಸ ನಕ್ಷೆ ಇರುವುದಿಲ್ಲ. |
| 2. | ಚಿದ್ರಿ ಗ್ರಾಮದ ಸ.ನಂ.125 ರ ಅಭಿವೃದ್ಧಿಯಾಗಿರುವ ವಸತಿ ಯೋಜನೆ ಪ್ರದೇಶವನ್ನು ಇಟಿಎಸ್ ಸರ್ವೇ ಕೈಕೊಂಡು, ಸದರಿ ಸರ್ವೇಯಲ್ಲಿ ಉದ್ಯಾನವನ / ಬಯಲು ಜಾಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶಗಳ ವಿಸ್ತೀರ್ಣವು ನಿಯಮಾನುಸಾರ ಇಲ್ಲದೆ ಕಡಿಮೆಯಾಗಿದ್ದು, ಈ ಬಗ್ಗೆ ಪರಿಶೀಲಿಸದೆ ಹಾಗೂ ಸರ್ಕಾರ ಅನುಮೋದನೆ ಪಡೆಯದೇ ವಸತಿ ಉದ್ದೇಶಕ್ಕೆ ಕಾಯ್ದಿರಿಸಿದ ವಿಸ್ತೀರ್ಣದಲ್ಲಿ ಹೆಚ್ಚುವರಿಯಾಗಿ ದೊರೆತ ಪ್ರದೇಶದಲ್ಲಿ ಮಧ್ಯಂತರ ನಿವೇಶನಗಳನ್ನು ಗುರುತಿಸುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆ. |
| 3. | ಚಿದ್ರಿ ಗ್ರಾಮದ ಸ.ನಂ. 125 ರ ಪರಿಷ್ಕೃತ ವಿನ್ಯಾಸ Annexure-4 ನಕ್ಷೆಯೊಂದಿಗೆ ಸ್ಥಳ ಪರಿಶೀಲಿಸಲಾಗಿ ನಕ್ಷೆಯಲ್ಲಿನ ರಸ್ತೆಗಳು ಹಾಗೂ ನಿವೇಶನಗಳ ಅಳತೆಗಳಗೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ. |
| 4. | ಪ್ರಾಧಿಕಾರದಿಂದ E- proc ಮೂಲಕ ಹರಾಜು ಮಾಡಲು ಬೀದರ ನಗರದ ಬೀದರ ಕ್ರಾಂತಿ ಹಾಗೂ ಬೀದರ ಸಂದೇಶ ದಿನ ಪತ್ರಿಕೆಗಳಲ್ಲಿ ನೀಡಿರುವ ದಿ:26-03-2022 ಹಾಗೂ 27-03-2022 ರ ಪ್ರಕಟಣೆಯಲ್ಲಿ ಕ್ರಮ ಸಂಖ್ಯೆ: 3, 4 ರಲ್ಲಿ ದಿನಾಂಕಗಳನ್ನು ತಪು ನಮೂದಿಸಿರುತ್ತಾರೆ. ದಿ:26-03-2022 ರಂದು ಬೀದರ ಕ್ರಾಂತಿ ದಿನ ಪತ್ರಿಕೆಯ ಪುಟ ಸಂಖ್ಯೆ: 4 ರಲ್ಲಿ ಪ್ರಾಧಿಕಾರದ ಹರಾಜು ಪ್ರಕಟಣೆ ಇರುವುದಿಲ್ಲ ಆದರೆ ಕಚೇರಿ ಕಡತದಲ್ಲಿರುವ ಇದೆ ದಿನಾಂಕದ ಇದೇ ಪತ್ರಿಕೆಯ ಪುಟ ಸಂಖ್ಯೆ:4 ರಲ್ಲಿ ಪ್ರಕಟಣೆ ಹೊರಡಿಸಿರುವ ಬಗ್ಗೆ ಮುದ್ರಿತ ಪ್ರತಿ ಇರುತ್ತದೆ. |
| 5. | ಬಿಡಿ ನಿವೇಶನಗಳನ್ನು ಹರಾಜು ಮಾಡುವಾಗ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/291/ಅಪ್ರಾವಿ/98, ಬೆಂಗಳೂರು, ದಿ:24-11-2000 ರಂತೆ 75%-25% (ಮೀಸಲಾತಿಯನ್ನು ವರ್ಗಾವಾರು) ಪರಿಗಣಿಸದೇ ಇರುವುದು ಕಂಡುಬರುತ್ತದೆ. |
| 6. | ಮೂಲೆ ನೀವೇಶನ ದರಗಳನ್ನು ನಿಗಧಿ ಪಡಿಸುವಾಗ ಆಯಾ ಪ್ರದೇಶದ ನಿವೇಸನ ದರಗಳ 10% ರಷ್ಟು ಹೆಚ್ಚಿಗೆ ದರ ನಿಗದಿಡಿಸಿರುವುದಿಲ್ಲ. |
| 7. | ನೋಂದಣಿ ಶುಲ್ಕ ಪಾವತಿಸಿರುವ ಬ್ಯಾಂಕ್ ಚಲನ್‌ಗಳಲ್ಲಿ ಬೇರೆ ಬೇರೆ ಹೆಸರುಗಳಿದ್ದು ಸಹಿ ಒಂದೆ ತರಹ ಇರುತ್ತದೆ ಹಾಗೂ ಖರೀದಿ ಪತ್ರದಲ್ಲಿ ಬೇರೆ ಸಹಿಗಳು ಇರುತ್ತವೆ. ಸದರಿ ಚಲನ್‌ಗಳನ್ನು ಒಂದೆ ದಿನ ಪಾವತಿಸಿರುವುದು ಕಂಡು ಬರುತ್ತದೆ. ಇದರಲ್ಲಿ ಎರಡು ಚಲನ್‌ಗಳು ತಿದ್ದುಪಡಿ ಮಾಡಿ ಬೇರೆ ಹೆಸರು ಬರೆದಿರುವುದನ್ನು ಗಮನಿಸಿ ಬ್ಯಾಂಕಿನಿಂದ ಚಲನ್‌ಗಳನ್ನು ತರಿಸಿ ಪರಿಶೀಲಿಸಿದಾಗ ತಿದ್ದುಪಡಿ ಇಲ್ಲದೇ ಬೇರೆಯವರ ಹೆಸರಿಗೆ ಇರುವುದು ಗಮನಿಸಲಾಗಿದೆ. |

| | |
|---|---|
| ೮. | ಒಟ್ಟು 11 ನಿವೇಶನಗಳಿಗೆ Single Bid ಆಗಿದ್ದು ಹರಾಜಿನಲ್ಲಿ ಸ್ಪರ್ಧೆ ಆಗಿರುವುದಿಲ್ಲ. ಆಯುಕ್ತರು ಈ ಬಗ್ಗೆ ಅಧ್ಯಕ್ಷರಿಗೆ ಟಿಪ್ಪಣಿಯನ್ನು ಮಂಡಿಸಿದ್ದು ಇರುತ್ತದೆ. ಆದರೆ ಈ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಆಗದೇ ತೀರ್ಮಾನವನ್ನು ಕೈಗೊಳ್ಳಲಾಗಿದೆ. |
| ೯. | ನೌಬಾದ ಸ.ನಂ.೮ ರಲ್ಲಿನ 4 ನಿವೇಶನಗಳನ್ನು ಈಗಾಗಲೇ ಹಂಚಿಕೆಯಾಗಿರುವುದರಿಂದ ನಿಯಮಾನುಸಾರ ಹಂಚಿಕೆಯಾದವರ ಹಂಚಿಕೆಯನ್ನು ರದ್ದು ಪಡಿಸದೇ ಪುನ: ಹರಾಜಿಗೆ ಪರಿಗಣಿಸಿರುತ್ತಾರೆ. |

ಈ ಮೇಲೆ ತಿಳಿಸಿದ ನ್ಯೂನ್ಯತೆಗಳನ್ವಯ ಪ್ರಾಧಿಕಾರದ ವತಿಯಿಂದ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸದೇ ಇರುವುದು ಹಾಗೂ ಇದರಿಂದ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

(ಎ.ಎಮ್.ಕಾಂಬಳೆ)
ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ವಿಭಾಗೀಯ ಕಚೇರಿ,
ಕಲಬುರಗಿ

(ಶಾಂತಲಾ ಎಮ್.ಎಸ್.)
ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,

(ವಿವೇಕ ಎನ್. ಕಾರೇಕರ್)
ನಗರ ಮತ್ತು ಗ್ರಾಮಾಂತರ ಯೋಜನಾ
ಅಪರ ನಿರ್ದೇಶಕರು,
ವಲಯ ಕಚೇರಿ
ಧಾರವಾಡ.